ಶ್ರೀ ಎಚ್. ಎನ್. ನಂಜೇಗೌಡ.—ಒಂದು ವಿಷಯ ಸ್ವಾಮಿ, 21 ಎಣಿಸುವುದರೊಳಗೆ ನನ್ನ ಮಾತನ್ನು ಮುಗಿಸುತ್ತೇನೆ. 59ನೆಯ ರೂಲ್ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ಗೆ ಕಳಿಸಿದ್ದೆ. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ. ಅಧ್ಯಕ್ಷರನ್ನು ಅನೇಕ ಸಾರಿ ನೋಡಿದೆ; ಅಲ್ಲದೆ ಈ ಸಭೆಯಲ್ಲಿ ಆ ಬಗ್ಗೆ ಎರಡು ಮೂರು ಸಾರಿ ಪ್ರಸ್ತಾಪ ಮಾಡಿದ್ದೇನೆ. ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಇನ್ನೂ ತಿಳಿದುಬಂದಿಲ್ಲ. ಕೃಷ್ಣಾ ಗೋದಾವರಿ ನೀರಿನ ವಿಚಾರದಲ್ಲಿ ಚರ್ಚೆ ಮಾಡಬೇಕು ಎಂದು ನಾನು ಸೂಚನೆಯ ಮೂಲಕ ತಿಳಿಸಿರುವುದಕ್ಕೆ ಉತ್ತರ ಕೊಡದೆ ಈ ಬಗ್ಗೆ ಅನಾದರಣೆ ಧೋರಣೆ ಇದೆ ಎಂದು ಕಂಡುಬರುತ್ತದೆ. ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನ ಮನೋಭಾವನೆ, ಸ್ಪೀಕರ್ ಅವರ ಮನೋಭಾವನೆ ಇದರಿಂದ ಆಡಳಿತದಲ್ಲಿ ಆಗತಕ್ಕಂಥ ಅನಾದರಣೆಯನ್ನು ಪ್ರತಿಭಟಿಸಿ ನಾನು ಈ ಸಭೆಯಿಂದ ಹೊರಗೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಎಸ್. ಕೃಷ್ಣನ್.—ನನಗೂ ಒಂದು ಪತ್ರ ಬಂದಿದೆ.

CONSIDERATION OF THE REPORT OF THE COMMISSION ON THE MYSORE-MAHARASHTRA-KERALA BOUNDARY DISPUTES.

Sri B. D. JATTI (Minister for Food and Civil Supplies).—Sir, I beg to move :

> "That the Report of the Commission on Mysore, Maharastra and Kerala boundary disputes be taken into consideration."

Sri B. B. SAYANAK (Belgaum).—On a point of order, Sir. This session is called to discuss the Mahajan Commission Report. It was the Chief Minister who agreed to call for this session to discuss the report. He is the Leader of the House and he has to move this. This is a matter affecting the whole State and all the Kannada people. The Leader of the House is not present just at this moment and it is an insult to this House.

Sri B. P. GANGADHAR (Tumkur).—I support the contention of my friend. Perhaps, the Chief Minister is trying to shirk his responsibility after he has been elected as the President of All India Congress Committee. He does not want to take the responsibility and he wants to safeguard the interests of Keralites and Maharastrians I have all the respect and regard to Sri Jatti. But, it is the Chief Minister who should move this motion.

Mr. DEPUTY SPEAKER.—He might have authorited Sri Jatti to move it.

(Interruption by Sri B. P. Gongadhar)

Order, order. This is a very important matter and members ar anxious to participate in the Debate. But members are simply wastin the time.

[Mr. SPEAKER in the Chair]

†**Sri SHARAN GOWDA INAMDAR** (Jewargi).—Sir, I rise to a point of order, Sir. Business Advisory Committee ರಿಪೋರ್ಟ್ ಪ್ರಕಾರ ಮಹಾಜನ್ ಕಮಿಷನ್ ವರದಿ ಈ ಮನೆಯ ಮುಂದೆ ಚರ್ಚೆಗೆ ಬರತಕ್ಕಂಥಾದ್ದು ಇದೆ. ನಮ್ಮ ಮುಂದೆ ಚರ್ಚೆಗೆ ಬರತಕ್ಕಂಥ ಈ ರಿಪೋರ್ಟ್ ಬಗ್ಗೆ ಮಾನ್ಯ ಸಚಿವರಾದ ಶ್ರೀಮಾನ್ ಜತ್ತಿಯವರು ಕೇವಲ "it is for consideration" ಎಂದು ನಮ್ಮ ಮುಂದೆ ಇಟ್ಟಿದ್ದಾರೆ. ಈ ರಿಪೋರ್ಟನ್ನು ಈ ಮನೆಯ ಮುಂದೆ ಇಟ್ಟು ಜನರಿಂದ ಆರಿಸಿ ಬಂದಂಥ ಪ್ರತಿನಿಧಿಗಳಿಂದ ಸುಮ್ಮನೆ ಅಭಿಪ್ರಾಯ ಪಡೆದುಕೊಳ್ಳುವುದು ಇಷ್ಟೇ ವಿಚಾರ ಸರಕಾರಕ್ಕೆ ಇದ್ದ ಹಾಗೆ ಕಾಣುತ್ತದೆ. ಈ ವರದಿಯ ಬಗ್ಗೆ ಕೇವಲ gathering of opinion ಸಲುವಾಗಿ ಇದು ನಮ್ಮ ಮುಂದೆ ಬಂದಿದೆ ಎಂದು ಸಂಶಯವಾಗುತ್ತದೆ. ಈ ರಿಪೋರ್ಟ್ ಬಗ್ಗೆ ಕೇವಲ gathering of opinion ಮಾಡತಕ್ಕದಲ್ಲ. ಸರಕಾರದವರು ತಮ್ಮ ವಿಚಾರಗಳನ್ನು ಒಂದು ನಿರ್ಣಯದ ರೂಪದಲ್ಲಿ ಇಟ್ಟು ತಮ್ಮ ನಿಲುವನ್ನು ಸಭೆಗೆ ತಿಳಿಸಿ ನಮ್ಮ ಮುಂದೆ ಇದನ್ನು ಇಡಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಹಾರಾಷ್ಟ್ರದಲ್ಲಿ ಮಹಾಜನ್ ಕಮಿಷನ್ ರಿಪೋರ್ಟ್ ಮಂಡಿಸುವದಕ್ಕೆ ಮುಂಚೆ ಅಲ್ಲಿಯ ಮುಖ್ಯ ಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್ ಅವರು ಒಂದು ಠರಾವು ಮಾಡಿ ಅದರ ಜೊತೆಗೆ ಕೊಟ್ಟು ಮಂಡಿಸಿದರು. ಇದಲ್ಲದೆ ಸರಕಾರದ ನಿಲುವನ್ನು. ಸರಕಾರದ ಧೋರಣೆಯನ್ನು ಸಭೆಯ ಮುಂದೆ ಇಟ್ಟು ಸಭೆಯ ಅಭಿಪ್ರಾಯ ಪಡೆಯಲು ಪ್ರಯತ್ನ ಮಾಡಿದರು. ಇವತ್ತು ನಮ್ಮ ಸರಕಾರ ಏನು ನಿರ್ಣಯ ಮಾಡಿದೆ ನಮಗೆ ಗೊತ್ತಾಗಿಲ್ಲ.

I appeal to the Government through you that they must come with a Resolution and that Resolution must be moved by Sri Nijalingappa, the Chief Minister of Mysore State. ಅದು ಶ್ರೀಮಾನ್ ನಿಜಲಿಂಗಪ್ಪನವರಿಂದ ಬರಲೇಬೇಕು. ಸ್ಪಷ್ಟವಾಗಿ ನಿರ್ದಿಷ್ಟವಾದ ಸರಕಾರದ ನಿಲುವು ಈ ಸಭೆಯ ಮುಂದೆ ಬಾರದೇ ಇದ್ದರೆ ಯಾರಿಂದಲೂ ಈ ಚರ್ಚೆಯಲ್ಲಿ ಭಾಗವಹಿಸುವುದು ಸಾಧ್ಯವಿಲ್ಲ ಎಂದು ಹೇಳುತ್ತೇನೆ.

Sri B. P. GANGADHAR.—Mr. Speaker, may I rise to support the point of order ?

Mr. SPEAKER.—No, not without my consent and without my permitting the member. Now Sri Siddaveerappa will speak.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಇದು ಬಹಳ ಮುಖ್ಯವಾದ ವಿಷಯ. ಈ ವರದಿಯನ್ನು ಚರ್ಚೆ ಮಾಡುವ ಕಾಲಕ್ಕೆ ಟ್ರೆಜರಿ ಬೆಂಚು ಒಂದಾಗಿರುವುದರಿಂದ ಒಂದೊಂದು ವೇಳೆ ಕ್ಲಿಷ್ಟ ಸಮಸ್ಯೆ ತಂದು ಸಭೆಯ ಕಾರ್ಯಕಲಾಪ ನಡೆಯುವುದಕ್ಕೆ ಅಡ್ಡಿ ತರತಕ್ಕಂಥಾದ್ದನ್ನು ನೋಡಿದರೆ ಯಾರಾದರೂ ಪಶ್ಚಾತ್ತಾಪ ಪಡಬೇಕಾದುದು. ಸ್ವಾಮಿ, ಈಗ ನಾವು ತಮ್ಮ ಮುಂದೆ ನಿವೇದಿಸತಕ್ಕ ವಿಷಯವನ್ನು ಶಾಂತರೀತಿಯಿಂದ ಕೇಳಿ. ಮುಖ್ಯವಾದ ಸಮಸ್ಯೆ ಬಂದಿರತಕ್ಕ ಕಾಲದಲ್ಲಿ ಯಾವರೀತಿ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕು ಎನ್ನುವುದನ್ನು ತಾವು ತೀರ್ಮಾನ ಮಾಡಬೇಕೆಂದು ತಮ್ಮಲ್ಲಿ ಅತ್ಯಂತ ಗೌರವದಿಂದ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಇದು ಏನು ಕಾರಣವೋ ನಮಗೆ ಇವತ್ತಿನವರೆಗೂ ಅರ್ಥವಾಗಿಲ್ಲ. ಮಾನ್ಯ ಸಭೆಯ ನಾಯಕರು ಇಂಥ ಸಮಸ್ಯೆಗಳೆಲ್ಲ ಬಂದಾಗ ನುಣುಚಿಕೊಳ್ಳುವುದು ಅವರ ಸ್ವಭಾವವಾಗಿದೆ ಎನ್ನುವುದು ನಮಗೆ ಇದುವರೆಗೆ ಬಹುಮಟ್ಟಿಗೆ ಮನವರಿಕೆಯಾಗಿದೆ. ಇಂಥ ವಿಷಯಕ್ಕೆ ಸಂಬಂಧಪಟ್ಟಂತೆ ಹಿಂದೆ ಇದೇ ಸಭೆಯಲ್ಲಿ ನಡೆದಿರತಕ್ಕ ಪ್ರೊಸೀಡಿಂಗ್ಸ್ ಇದೆ. 1956ನೇ ಇಸವಿಯಲ್ಲಿ ಸ್ಟೇಟ್ಸ್ ರೀ ಆರ್ಗನೈಜೇಷನ್ ಕಮಿಟಿ ರಿಪೋರ್ಟ್ ಬಂದಾಗ, ಆಗ್ಗೆ ಸಭಾನಾಯಕರಾಗಿದ್ದಂಥ ಶ್ರೀಮಾನ್ ಕೆ. ಹನುಮಂತಯ್ಯ ಅವರು, ಅವರೇ ಈ ಸಭೆಯ ಮುಂದೆ ಆ ರಿಪೋರ್ಟನ್ನು ಇಟ್ಟು ಅಲ್ಲಿ ಅದಂಥ ವಾದಗಳನ್ನೆಲ್ಲ ಗ್ರಹಿಸಿ, ನಂತರ ಸಭೆಯ ಅಭಿಪ್ರಾಯವೇನಿವೆ ಎನ್ನುವುದನ್ನು ಒಂದು ನಿರ್ಣಯದ ರೂಪದಲ್ಲಿ ಸಭೆಯ ಮುಂದೆ ಇಟ್ಟು ಸಭೆಯ ಅಭಿಪ್ರಾಯವನ್ನು ಕ್ರೋಢೀಕರಿಸಿ ಅದನ್ನು ಸಂಬಂಧಪಟ್ಟವರಿಗೆ ಕಳಿಸಿಕೊಟ್ಟಂಥ ಒಂದು ನಿದರ್ಶನ ಇದೆ 1956ನೇ ಇಸವಿಯಲ್ಲಿ ಏನೇನು ಪ್ರೊಸೀಡಿಂಗ್ ಆಯಿತು ಎನ್ನುವುದನ್ನು ತಾವು ತೆಗೆಸಿನೋಡಬಹುದು. ಇದು ಏನೇ ಇರಲಿ ಶ್ರೀಮಾನ್ ನಿಜಲಿಂಗಪ್ಪನವರು ಇಲ್ಲಿಗೆ ಬಾರದೆ ಇರುವುದಕ್ಕೆ ಏನು ಕಾರಣವಿದೆಯೋ ಅದು ನನಗೆ ಗೊತ್ತಿಲ್ಲ. ನಾಲ್ಕು ದಿವಸ ಸಭೆಯ ಕಾರ್ಯಕ್ರಮದ ವೇಳಾ ಪಟ್ಟಿಯ ಪ್ರಕಾರ ಅವರ ಹೆಸರಿನಲ್ಲಿ, ಅವರ

ಅಂಕಿತದಲ್ಲಿ ಈ ನಿರ್ಣಯ ಬರುತ್ತಿತ್ತು. ಈ ದಿವಸ ಅದು ಏಕಾಏಕಿ ಶ್ರೀಮಾನ್ ಜತ್ತಿಯವರ ಹೆಸರಿನಲ್ಲಿ ಬಂದಿರುವುದನ್ನು ನೋಡಿದರೆ ಇದರಲ್ಲಿ ಏನೋ ಚಿದಂಬರ ರಹಸ್ಯವಿದೆ ಎನ್ನುವುದು ಅರ್ಥವಾಗುತ್ತದೆ. ವೈಯಕ್ತಿಕವಾಗಿ ಜತ್ತಿಯವರ ವಿಷಯದಲ್ಲಿ ನಾನು ಏನೂ ಹೇಳುತ್ತಿಲ್ಲ. ಅವರ ವಿಚಾರದಲ್ಲಿ ಅತ್ಯಂತ ಪ್ರೀತಿ, ಗೌರವವಿದೆ. ಆ ವಿಷಯ ಬೇರೆ. ಆದರೆ ಈ ದಿವಸ ಸಭಾನಾಯಕರಾಗಿರುವವರು ಇದನ್ನು ಮಂಡಿಸತಕ್ಕದು ಬಹಳ ಸೂಕ್ತವಾಗಿದೆ, ಔಚಿತ್ಯವೂ ಇದೆ ಅದಲ್ಲ. ಒಂದು ವೇಳೆ ಶ್ರೀಮಾನ್ ಜತ್ತಿಯವರು ಮುಂದಿನ ಸಭಾನಾಯಕರು ಎಂದೇನಾದರೂ ಹೇಳಿದರೆ ಅವಾಗ ಬೇಕಾದರೆ ಆಗಬಹುದು. ಇದನ್ನು ನಾನು ಲಘುವಾಗಿ ಹೇಳುತ್ತಿದ್ದೇನೆ ಎಂದು ತಿಳಿಯಬೇಡಿ. ಸಭಾ ನಾಯಕರು ಇದುವರೆಗೂ ಅವರು ಎಲ್ಲೇ ಇರಲಿ, ಅವರು ಬಂದು ಈ ಸಭೆಯಲ್ಲಿ ಕುಳಿತು ಕೊಂಡು, ಆ ಪೀಠವನ್ನಲಂಕರಿಸಿ, ಅದನ್ನು ಖಾಲಿ ಬಿಡದೆ, ಅವರೇ ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸಬೇಕು. ಇಲ್ಲದೆ ಇದ್ದರೆ ಮಾನ್ಯ ಸ್ನೇಹಿತರಾದ ಶ್ರೀ ಬೊಮ್ಮಾಯಿ ಅವರು ಹೇಳಿದಂಥ ಕಾರ್‍ಯವನ್ನು ನಾವೆಲ್ಲ ಮಾಡಬೇಕಾಗುತ್ತದೆ, ಅತ್ಯಂತ ವ್ಯಸನದಿಂದ. ಅದಕ್ಕೆ ಅವಕಾಶ ಕೊಡಬಾರದೆಂದು ನಾನು ಅವರಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ.

† Sri S. R. KANTHI.—Hon'ble Members have argued that the Leader of the House should come and move the motion. It is not necessary that the Leader of the House alone should move a motion. It can be moved by any member of the Treasury Bench.

ಶ್ರೀ ಎಚ್. ಸಿದ್ದವೀರಪ್ಪ.—ನಾಲ್ಕು ದಿವಸದಿಂದ ಮುಖ್ಯ ಮಂತ್ರಿಗಳ ಹೆಸರಿನಲ್ಲಿದೆ.

Sri S. R. KANTHI.—I can assure the Member that in the course of the debate, the Hon'ble Leader of the House will surely take part in the debate. That being so, the Hon'ble Members need not be touchy because it is permissible under the rules that any Member of the Treasury Benches can make a motion. As regards the other Motion, it is an unsubstantive motion. Rule 149 may be quoted here. Under rule 149, a situation can be discussed by the House without in any way taking vote, but in the meanwhile a motion may be made instead of only discussing the situation, the House is pleased to pass a certain resolution. It is also possible. So, Sir, in this connection, it need not be said that it will end only in an unsubstantive motion. It will end in a substantive motion that the Mahajan Commission recommendations may be adopted. That is the procedure which has been adopted by the Upper House also. I request the Hon'ble Members to disabuse their minds so far as that question is concerned that we are discussing this situation only in an unsubstantive way. After the discussion advances to a certain stage, a motion will be made whereby the House will express its opinion.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಈಗಾಗಲೇ ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಹಾಗೆ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿರುವ ಮತ್ತು ಈ ಸಭೆಯ ನಾಯಕರಾಗಿರುವ ಶ್ರೀ ನಿಜಲಿಂಗಪ್ಪನವರು ಈ ವರದಿಯನ್ನು ಚರ್ಚೆಗೆ ಈ ಸಭೆಯ ಮುಂದೆ ಮಂಡಿಸಬೇಕಾದ್ದು ಎಲ್ಲ ದೃಷ್ಟಿಯಿಂದ ಸೂಕ್ತವಾಗಿದೆ ಮತ್ತು ಅವರೇ ಮಂಡಿಸಬೇಕು. ಕಾನೂನನ್ನು ಮಾನ್ಯ ಸಚಿವರು ಸಭೆಯ ಗಮನಕ್ಕೆ ತಂದಿದ್ದಾರೆ. ಕಾನೂನುಗಳ ಪರಿಚಯ ನನಗಿದೆ ಮತ್ತು ಆ ರೀತಿಯೂ ಮಾಡಬಹುದು ಎನ್ನುವುದು ನನಗೆ ಗೊತ್ತಿದೆ. ಆದರೆ ಇಲ್ಲಿ ಒಂದು ಮುಖ್ಯವಾದ ಪ್ರಶ್ನೆ ಏನೆಂದರೆ, ಶ್ರೀ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕಾರಣದಿಂದ ಅವರು ಈ ವರದಿಯನ್ನು ಈ ಸಭೆಯ ಮುಂದೆ ಮಂಡಿಸುವುದರಿಂದ ಅವರಮೇಲೆ ಅಪಾದನೆ ಬರಬಹುದು ಎನ್ನತಕ್ಕ ಶಂಕೆ. ಬೇರೆ ರಾಜ್ಯಗಳವರು ಅವರು ನಿಷ್ಪಕ್ಷಪಾತವಾಗಿರುವುದಿಲ್ಲ ಎಂದು ತಿಳಿಯಬಹುದು. ನಮಗೆ ಪ್ರಕೃತ ಅವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿರುವ ತನಕ ಅವರನ್ನು ನಾವು ಕಾಂಗ್ರೆಸ್ ಅಧ್ಯಕ್ಷರು ಇಲ್ಲಿ ಬಂದು ಕುಳಿತಿದ್ದಾರೆ ಎಂದು

(ಶ್ರೀ ಎಸ್. ಗೋಪಾಲಗೌಡ)

ಪರಿಗಣನವದಕ್ಕೆ ಆಗುವುದಿಲ್ಲ ಮತ್ತು ಅವರೇ ಇವತ್ತು ಹೇಳಿರುವ ಪ್ರಕಾರ ಅಧ್ಯಕ್ಷರ ಚಾರ್ಜನ್ನು ವಹಿಸಿಕೊಳ್ಳುವುದೂ ಇನ್ನೂ ಮುಂದೆ ಇದೆ. ಅದು ಇನ್ನೂ ಭವಿಷ್ಯದಲ್ಲಿದೆ. ಅದು ಏನಾಗುತ್ತದೆ ಎನ್ನುವುದು ಅಪ್ರಕೃತ. ನಾವು ಈ ರೀತಿ ಒತ್ತಾಯ ಮಾಡುತ್ತಿದ್ದೇವೆ ಎನ್ನುವುದನ್ನು ತಾವೆಲ್ಲ ಮನಗಾಣಬೇಕು. ಮಹಾರಾಷ್ಟ್ರದಲ್ಲಿ ಮುಖ್ಯ ಮಂತ್ರಿಗಳಾಗಿರುವ ಶ್ರೀ ವಿ. ಪಿ. ನಾಯಕರೇ ಮಹಾಜನ್ ಸಮಿತಿಯ ವರದಿಯನ್ನು ತಿರಸ್ಕರಿಸಬೇಕು ಎಂದು ನಿರ್ಣಯವನ್ನು ಮಂಡಿಸಿರುವಾಗ, ಈ ಮನೆಯಲ್ಲಿ ಶ್ರೀ ನಿಜಲಿಂಗಪ್ಪನವರು ಮಂಡಿಸಿದರೆ ಅವರ ಸ್ಪಷ್ಟ ಅಭಿಪ್ರಾಯ ಅವರ ಅಭಿಪ್ರಾಯವನ್ನು ಈಗಾಗಲೇ ಹೊರಗಡೆ ಸ್ಪಷ್ಟವಾಗಿ ಹೇಳಿದ್ದಾರೆ—ಏನು ಎನ್ನುವುದನ್ನು ಹೇಳುವುದರಿಂದ ಒಂದು ತೂಕ ಬರುತ್ತದೆ, ಅರ್ಥ ಬರುತ್ತದೆ, ಈ ಸಭೆಯ ಅಭಿಪ್ರಾಯಕ್ಕೆ ಹೆಚ್ಚಿನ ಗೌರವ ಬರುತ್ತದೆ. ಅದನ್ನೇ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಪಡಿಸುತ್ತೇನೆ. ಶ್ರೀ ನಿಜಲಿಂಗಪ್ಪನವರು ಇಲ್ಲಿ ಹಾಜರಿದ್ದಾರೆ. ನಿನ್ನೆ ಅವರು ಹೇಳಿರುವ ಪ್ರಕಾರ ನಾನು ಯಾವತ್ತಿಗೂ ಸಿದ್ಧನಾಗಿದ್ದೇನೆ, ಯಾವಾಗ ಬೇಕಾದರೂ ಈ ವರದಿಯನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಆದುದರಿಂದ ಮತ್ತೆ ವಿಶೇಷವಾಗಿ ಇದನ್ನು ಯೋಚನೆ ಮಾಡಿ ಬೇರೆ ಯಾರಾದರೂ ಮೂವ್ ಮಾಡಲಿ, ಬೇರೆ ಮನೆಯಲ್ಲಿ ಶ್ರೀಮಾನ್ ರಾಮರಾಯರು ಮಾಡಿದ ಹಾಗೆ ಮಾಡಲಿ ಎಂದು ಹೇಳಬಹುದು. ಶ್ರೀಮಾನ್ ರಾಮರಾಯರು ಮೇಲ್ಮನೆಯ ಸಭಾ ನಾಯಕರು.

ಶ್ರೀ ಎಂ. ವಿ. ರಾಮರಾವ್.—ನಾನು ಅಲ್ಲಿ ಉತ್ತರ ಕೊಡಲಿಲ್ಲ, ಮೂವ್ ಮಾಡಿದೆ.

ಶ್ರೀ ಎಸ್. ಗೋಪಾಲ ಗೌಡ.—ಅಲ್ಲಿ ನೀವು ಸಭಾ ನಾಯಕರಾಗಿರುವುದರಿಂದ ಸರಿಯಾಯಿತು. ಇಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಸಭಾ ನಾಯಕರಾಗಿರುವುದರಿಂದ ಈ ಒಂದು ವರದಿಯನ್ನು ಸಭೆಯ ಮುಂದೆ ಇಡಬೇಕು ಮತ್ತು ಸಾಧ್ಯವಿದ್ದರೆ ಒಂದು ನಿರ್ಣಯವನ್ನೂ ತರಬೇಕು ಎಂದು ಹೇಳುತ್ತೇನೆ.

Mr. SPEAKER.—The House stands adjourned for half an hour.

The House rose at Three of the Clock to re-assemble at Thirty Minutes past Three of the Clock.

The House re-assembled at Thity-five Minutes past Three of the Clock.

[Mr. SPEAKER in the Chair]

Mr. SPEAKER.—I must apologize for having come five minutes late. That was only because of co-ordinating in regard to members, participation in the debate, which I could not possibly delay it. It would have taken perhaps more than 25 minutes here. To some extent, I have succeeded.

I don't think that there should be more discussion on the Point of Order on a preliminary point, because it was raised at the time prior to my coming in. I treat it as a Point of Order that the Resolution should not have been moved by the Hon'ble Minister for Food. Is that so?

Sri K. H. PATIL.—We want only our Leader to move the Resolution; that is all. We are not standing on formalities or technicalities.

Sri S. NIJALINGAPPA (Chief Minister).—Sir, if I am permitted to intervene............

Mr. SPEAKER.—How can the hon'ble Chief Minister do it unless I decide the point? If I allow the Hon'ble Chief Minister, I will have to allow everybody. If it is a Point of Order, I will have to give a Ruling. If it is an appeal to the Chief Minister, I will pass it on to him.

Sri K. H. PATIL.—We appeal to the Chief Minister, through you, Sir.

Mr. SPEAKER.—So, I take it as an appeal, and I do not treat it as a Point of Order. The Resolution is there for the last four days in the List of Business. Members could have mentioned it earlier and we could have adjusted. Otherwise, they could have moved an amendment. In the agenda it was stated that the Chief Minister will move this resolution. It does not matter even if any other Minister of the Cabinet moves this. Whoever moves, it is all the same.

Sri H. SIDDAVEERAPPA.—If we commit any mistakes you are here to direct us. In the previous session of this House *i.e.*, in 1956 when the S.R.C. Report came up for consideration, it was the Leader of the House that moved that report. Then only the discussion took place. You pose questions and you reply. We are not here to spend time sitting idle. We are not school children. The appeal from this side is that the Leader of the House should move and none else. The Leader of the House knows all the implications of this report. Therefore we are expecting a lead from him and whatever lead comes, will be the light and guide and accordingly the discussion will flow. I appeal to you to call the Leader of the House to move this resolution.

Sri S. R. BOMMAI (Kundgol).—I raise a point of order, Sir. In view of the important situation arising out of the report and in view of the fact that the report is going to affect the Kannada people and in view of the fact that the Maharastrians have already decided not to accept the report and in view of the fact that some informal discussion has already started in the Centre, I would make an appeal to the Chief Minister to move this report and guide us properly.

Mr. SPEAKER.—The members are aware of the rules and therefore I do not refer to any rule. It was stated that it is a point of order and immediately it was turned in into an appeal requesting the Chief Minister through me to move the resolution.

Sri B. P. GANGADHAR.—The framers of rules did not expect that in the year 1967 a resolution of this nature would come and that the territories of the States would be adjusted and some parts of the Karnataka would go away to Maharashtra. This is a matter involving territorial adjustments. It requires and it is very proper that the Leader of the House must move this resolution taking into consideration the importance of the situation and also the stand taken by the Maharashtrians and the Chief Minister of Kerala. The matter has been

(SRI B. P. GANGADHAR)

thrashed out both in Maharashtra and by the Chief Minister of Kerala. Therefore, it is a very important resolution in the interest of the State and therefore, it should be moved by the Leader of the House only.

MR. SPEAKER.—I am unable to understand the argument that the rules are framed by the predecessors in office. The rules have been framed for the observance by the members of the Legislature. The Legislature has got conventions and rules. Unless those rules are changed by this House, they are binding upon all the members. Therefore those rules are to be either ignored or not taken note of. I cannot accept the reasoning employed. The rules stand there. First he said it was a Point of order and then he said it was only an appeal. Therefore, I cannot uphold the point of order as there is no reasoning in it. I am told that the resolution was read over by the Minister for Food. It is in the Agenda in his name, and whether the Chief Minister should take it up at this stage or after, it is for the House to wait and see. There is nothing to be added by me.

Motion moved :

"That the Report of the Commission on Maharashtra-Mysore-Kerala Boundary Disputes be taken into consideration."

† SRI L. SRIKANTIAH.—Sir, I beg to submit that this House ha no authority to discuss the report of the Mahajan Commission for the following reasons................

MR. SPEAKER.—Hon'ble Member could have raised this earlier. He could have given his valid reasons for this before we proceeded on this subject.

SRI L. SRIKANTIAH.—For want of time I could not do so. Am I estopped from speaking ? The reasons are :

(1) With great respect to Sri Mahajan I must say that when this Commission was appointed this House was not consulted ;

(2) When the Government of Mysore participated in the deliberations, this House was not taken into consideration ;

(3) More than that. it is a report submitted by late Sri Mahajan to the Government of India and that report is coming up before the Central Government. The Central Government has to take a decision in the matter and for that in the form of a Bill they would place it before the Parliament.

Therefore, at this stage when that Commission is not appointed by this House, nor this House has directed the ministry to praticipate in the Commission, I have great doubt in what sense are we competent to discuss it. Even for argument sake we discuss it at great length what is the outcome of it ? At best the decision taken by the Central Government is final and the Bill drafted by the Central Government is final.

More than that another point arises for consideration. The motion reads as follows :

> " That the Report of the One Man Commission on Mysore-Maharashtra and Mysore-Kerala boundary disputes be taken into consideration ".

The motion is not specific. Here, it is not a judgment of a court wherein its decision is final and binding on any party. Nor he is an arbitrator. Then, what is it we have to discuss here ? Are we to discuss the arguments advanced by the learned counsels on behalf of the Maharashtra and Mysore Government ? Is that all we have to discuss ? On the other hand it would be within the province of this House to discuss it, had it been in the form of a resolution—that the Government recommends to accept it or not. The motion is not specific.

Another question arises and that is, what is it we have to discuss and that point is not made clear. Do we agree or do we not agree with the report ? If you agree it is superfluous. If you do not agree, I do not know how the Central Government will react. Therefore, at this juncture to discuss the pros and cons of the report of the commission, I consider is not proper. That commission is not appointed by this House nor has this House directed the ministry to participate in it. With these words, I submit this House is not competent to discuss the report at this stage.

† SRI S. D. KOTHAVALE (Sankeswar).—My hon'ble friend Sr Srikantiah has raised very important point. He calls it a point or order. I submit that it cannot be a point of order as it does not involve any breach of the Rules of Procedure that we have adopted. He has raised another point namely, the propriety or otherwise of moving and considering the resolution that is moved by the hon'ble Minister. He has raised this point of propriety without, it appears to me, much thought about it. This House is interested in the integrity and welfare of the entire State as such. I think without going much into the history of this question I may say when the question of linguistic States in India, came up, a commission was appointed and they submitted a report and as the hon'ble member Sri H. Siddaveerappa pointed out, even before the Parliament took a decision, the then Chief Minister moved a resolution here and sent it for the consideration of the Parliament and the Government of India. The question of integrity and welfare of the State is an important point which affects everybody. Now the question is, supposing we are to lose a few areas or some areas, which are part of Maharashtra coming to us, it is a matter of life and death to us. In the larger interest of unity and security of India it may not be significant. The position is, all subjects which are within the competence of the States according to the VII Schedule of the Constitution of India are within the competence of this House. The Chief Minister on behalf of the Government agreed to the reference made to one man commission. Therefore he acted on behalf of the State and the Commission has been

(SRI S. D. KOTHAVALE)

appointed. The Commission submitted its report and it is in the interest of the State that this House should be interested in these recommendations. We are losing certain areas and gaining certain areas. If it is not accepted, status quo remains and in either of these, we are interested. Therefore the question is of such vital importance with which we are concerned and the House has every reason to take interest and to debate it.

One other point expressed is that whatever we might say, the judgment does not rest with us. True, ultimately the judgment rests with the Parliament and not even in the Government of India also. The Government of India under the Constitution are bound to submit the proposals to the Parliament for its acceptance and ultimate decision may be taken and that is binding upon Maharashtra, Mysore and Kerala. It is open for us to express our views and they are bound to have effect. After in democracy there is run an open a public dialogue and this dialogue is of highest importance. Therefore, the proposition put forward by Sri L. Srikantaiah appears to be ridiculous.

We have last two hours in the preliminary discussions. Several hon'ble members would have expressed their opinion in these two hours. The hon'ble member says that no resolution urging any particular action is moved. May I remind that in the Legislative Council a resolution of this type was moved and debated and ultimately another substitute resolution which directed particular action to be taken was moved. I think the same procedure is to be followed here. I fail to understand how my friend can express the way he has expressed. I request that discussion may be resumed.

4-00 P.M.

SRI H. SIDDAVEERAPPA.—Sir, what is it that is going on ?

MR. SPEAKER.—The hon'ble Member should ascertain it from the other members.

SRI H. SIDDAVEERAPPA.—You can give your ruling ; we shall bow down to it and proceed.

MR. SPEAKER.—There are two points which I would like to dispose of before I call upon Sri V. N. Patil. Members time and again say, "Before you give the ruling, hear us". Sri V. N. Patil got up even before I called upon Sri Kothavale. Both of them attracted my attention. If I am to shut out discussion, it will not be proper. I would appeal to Sri V. N. Patil that there is nothing more to add. If he insists I must give him a chance.

The other point is that members will bow down to the ruling I give. I have given a ruling on a point of order. Another point of order has been raised, and I am going to give my ruling on that.

How am I to give a ruling if members do not finish their speeches? There is not much substance in the discussion that is going on but I am helpless if members insist on speaking. Unless there is co-operation, work in a legislature will not be possible.

Sri V. N. PATIL (Humnabad).—Sir, the Hon'ble Chief Minister said yesterday that he was prepared to make the motion but that the papers were not with him and that he would be ready the next day with those papers and make the motion. Today we expected that he would make the motion as Leader of the House. We are competent to discuss this matter and I request the Hon'ble Chief Minister not to bother about prestige and technicalities as this is a matter which touches the interests of the people of the entire Mysore State.

Mr. SPEAKER.—What has the member got to say about the point of order raised?

Sri V. N. PATIL.—I am not supporting it. It is the voice of the people of the entire Mysore State that we want to raise here. Technically speaking this is not a Bill and yet we have right to express the opinion of the people of the entire Mysore State as their rights and privileges are being curbed. So, this House is competent to discuss this report and I disagree with Prof. Srikantaiah.

Sri S. S. SHETTAR.—Sir, I want to submit a few words to substantiate.........

Mr. SPEAKER.—I really do not understand this! If one member wants to speak and if I allow him, another hon'ble Member interjects 'the Speaker may go on calling'. What is all this? Today, I am finding some approach which is not usually there. All these remarks are not helping anybody. Either I exercise my discretion and say that I will not hear anybody on the point of order or I allow the members to speak.

Sri S. S. SHETTAR.—I want to substantiate the contention of Prof. Srikantaiah. A similar point of order was raised under article 3 of the Constitution and I shall bring to your notice, Sir, the few words you said by way of ruling. The Chair said that it is a matter of concern to our State and at one time this report shall have to be discussed but in what manner we shall consider? So, no doubt the report will have to be discussed by this august House but only in a particular context referred to in article 3 of the Constitution. Whenever a particular State and its boundary is affected, that State will have to be consulted before a Bill in that regard is introduced in the Parliament. In that context, if the report is discussed there is some meaning. The ruling of the Chair on that occasion was that article 3 never put any restrictions on the House in the matter of discussing the Bill. In view of that, the question is whether it is proper for this House to discuss this repprt. So many transactions may be carried on by the Government of Mysore outside the House. The point is whether they can be discussed by this House. No doubt,

(SRI S. S. SHETTAR)

it is a serious matter affecting the boundaries of our State. Supposing we give a certain verdict today; we may be called upon to give another verdict when the Bill is referred for the opinion of this House. At that time this may stand as a bar for expressing our opinion. In this context it is better that we have only a broad discussion. Prof. Srikantaiah is correct in saying what he has said.

Sri S. R. BOMMAI.—A similar point was raised and the Chair has already given a ruling.

Mr. SPEAKER.—A point of order has been raised by Prof. Srikantaiah and Sri Bommai points out that there is a prior ruling which covers this question. The hon'ble Member Sri Shettar also referred to that point of order and the ruling given by me on that occasion. On that occasion I pointed out that article 3 has got a sphere of activity and consideration of the report on the lines indicated in the agenda does not cover it. Prof. Srikantaiah further urges that this House is not competent to discuss it because the Commission was not appointed by this House. I do not think the scope of the debate in this House is restricted only to the reports of Commissions appointed by this House. Commissions may be appointed or may not be appointed by this House. More often it is the executive Government that appoint Commissions and Legislatures rarely appoint commissions. It appoints committees and such other bodies. Any way I am not concerned with it. The basis of the argument is that the appointment of the commission was not by this House. It is not a safe test, whether this House is not competent to discuss all matters which will affect the interests of the State is the point to be considered. It was in that context that there was a meeting between the Hon'ble Chief Minister and Hon'ble Members representing all parties of the Opposition of this House that there was a discussion and it was thought that the legislature should be convened immediately expressly for this purpose. I do not think it could have escaped their attention. Any way, it is a matter to come before the House and it is brought in accordance with the rules governing business in this House. A motion has been moved. That motion is in the air. If it is a matter relating to foreign countries or some other matters, which will be fully foreign, then perhaps it could be said that this House has no competence to discuss. Any how that aspect does not arise. It is only a negative argument. Then it was said, what is the opinion to be given by the House. Whether it can be done in the form of a motion that is before the House. I am not going to express any opinion. I have only to say whether it is in order or there is any point of order which will preclude it. I am unable to accept the point of order.

Now at least the debate will be taken up. If there is anything that the Chief Minister wants to say, he can say.

† SRI S. NIJALINGAPPA (Chief Minister).—Sir, I am sorry that there has been unnecessary storm in the Tea cup, that has been raised. It is for the purpose of convenience that the Minister for Food was requested to move this motion for consideration. So, it does not gain in importance if I move or he moves or any of my colleagues move it. It is a motion by the Government that this report may be taken into consideration.

I am not going to dilate at length at this stage. This is a matter which has been agitating the concerned States ever since 1956. And as a result of various attempts made by Maharashtra and by us, this matter was taken up by the Central Government and a retired Chief Justice of the Supreme Court was appointed as one-man Commission to go into the question and make recommendations. The report is before the House. All Hon'ble Members of this House, I am sure, have gone through it. It is for them to express themselves. My views are well-known, not now, but for the last 30 years. Friends here also know my views. But whatever that is, I would like to hear friends, members of this House express themselves. I am sure, having heard them, I will certainly express my views and I attach as much importance to the views expressed by Hon'ble Members as I attach to my own views on this matter.

I hope Sir, you will give Hon'ble Members reasonable opportunities on both sides and also members of the Maharashtra Ekikarana Samithi. I want everybody to be heard and if as a result of these dicsussions, a decision is to be taken by this House, I expect it will be taken.

[Mr. DEPUTY SPEAKER in the Chair]

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಯಾರು ಕೊಟ್ಟಿರುವ ವರದಿಯನ್ನು ಈ ಸಭೆ ಚರ್ಚಿಸಿ ತನ್ನ ಅಭಿಮತವನ್ನು ವ್ಯಕ್ತಪಡಿಸಬೇಕಾಗಿದೆಯೋ ಅವರು ಈಗ ನಮ್ಮೊಂದಿಗೆ ಇಲ್ಲ. ಈ ವರದಿಯನ್ನು ಕೊಟ್ಟಂಥ ಶ್ರೀ ಮೆಹರ್‌ಚಂದ್ ಮಹಾಜನ್ ಅವರು ಈಚೆಗೆ ನಿಧನರಾದರು. ಅವರ ನಿಧನಕ್ಕಾಗಿ ನಾನು ಈ ಸಭೆಯ ಪರವಾಗಿ ಮತ್ತು ರಾಜ್ಯ ಸರ್ಕಾರದ ಹಾಗೂ ರಾಷ್ಟ್ರದ ಜನರ ಪರವಾಗಿ ಮೊಟ್ಟ ಮೊದಲನೆಯದಾಗಿ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಈ ವರದಿಯನ್ನು ನಾವು ಈ ಸಭೆ ಸೇರಿದ ಮೊದಲು ದಿನವೇ ಚರ್ಚಿಸಬೇಕಾಗಿತ್ತು. ಆದರೆ ಸರ್ಕಾರದವರು ಸಕಾಲದಲ್ಲಿ ಆ ವರದಿಗಳನ್ನು ಸದಸ್ಯರಿಗೆ ತಲುಪಿಸಲು ಅಸಮರ್ಥರಾದುದರಿಂದ, ನಮ್ಮಲ್ಲಿ ಕೆಲವು ಸದಸ್ಯರು ವರದಿ ಕೈಗೆ ಬಾರದೆ ಪತ್ರಿಕಾ ಹೇಳಿಕೆಗಳ ಆಧಾರದ ಮೇಲೆ ನಾವು ಇಲ್ಲಿ ಚರ್ಚೆ ಮಾಡುವುದು ಸೂಕ್ತವಿಲ್ಲವೆಂದು ಹೇಳಿ ಅದರ ಬಗ್ಗೆ ಕೆಲವು ಅಭಿಪ್ರಾಯಗಳು ಬಂದ ಕಾರಣ ನಮಗೆ ವರದಿಗಳನ್ನು ಕೊಡಿ, ಸ್ವಲ್ಪ ಸಮಯವನ್ನೂ ಕೊಡಿ ಕೊಟ್ಟ ಮೇಲೆ ಆ ಚರ್ಚೆಯನ್ನು ಆರಂಭ ಮಾಡೋಣವೆಂದು ಹೇಳಿ ಸರ್ಕಾರದ ಮುಂದೆ ಹಾಗೂ ಈ ಸಭಾಧ್ಯಕ್ಷರ ಮುಂದೆ ಕೇಳಿಕೊಂಡ ಪ್ರಕಾರ ಆ ವರದಿಯ ಚರ್ಚೆ ಅನಿವಾರ್ಯವಾಗಿ ಮುಂದಕ್ಕೆ ಹೋಯಿತು. ಕೆಲವು ದಿನಗಳನಂತರ ಈ ವರದಿಯನ್ನು ನಾವು ಈಗ ಚರ್ಚೆಗೆ ತೆಗೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿಯೂ ಕೂಡ ಈ ವರದಿಯನ್ನು ಯಾರು ಈ ಸಭೆಯ ಮುಂದೆ ಮಂಡಿಸಬೇಕು ಎಂಬ ವಿಷಯದಲ್ಲಿ ಸ್ವಲ್ಪಮಟ್ಟಿನ ತಕರಾರು ಕಂಡು ಬಂತು. ಅದರಲ್ಲಿ ನಮ್ಮ ಮಾನ್ಯ ಸಭಾಧ್ಯಕ್ಷರು ಬಹಳ ಬುದ್ಧಿವಂತರು. ಅವರು ಈ ವರದಿಯನ್ನು ಶ್ರೀ ಜತ್ತಿಯವರ ಮೂಲಕ ಈ ಸಭೆಯ ಮುಂದೆ ಮಂಡಿಸಿ ಅದನ್ನು ಶ್ರೀ ನಿಜಲಿಂಗಪ್ಪನವರ ಮೂಲಕ ಸಮರ್ಥಿಸಿ ಮಾತನಾಡಿಸಿ ನಮ್ಮ ಪಕ್ಷದವರ ಕ್ರೋಧಕ್ಕೆ ಸಿಕ್ಕದ ಮೇಲೆ ಅದಕ್ಕೆ ತಣ್ಣೀರು ಎರಚಿ ಪೌರೋಹಿತ್ಯ ಮಾಡಿ ಒಂದು ರೂಪಕ್ಕೆ ತಂದಿದ್ದಾರೆ. ಈಗ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಅನಿವಾರ್ಯ ಕಾರಣದಿಂದ ಈ ಸಭೆಯಲ್ಲಿ ಉಪಸ್ಥಿತರಲ್ಲ. ಅವರು ಈ ವರದಿಯ ಮೇಲೆ ಚರ್ಚೆಯನ್ನು ಆರಂಭ ಮಾಡಬೇಕಾಗಿತ್ತು. ಅವರಿಗೆ ಬದಲಾಗಿ

(ಶ್ರೀ ಎಸ್. ಗೋಪಾಲಗೌಡ)

ನಾನು ಈ ಹೊಣೆಯನ್ನು ಹೊತ್ತಿದ್ದೇನೆ. ಬೇರೆ ವಿಷಯಗಳ ಪ್ರಸ್ತಾಪದಲ್ಲಿ ಕಾಲ ಸಾಕಷ್ಟು ಕಳೆದು ಹೋಗಿದೆ. ನಾನು ಎರಡು ಗಂಟೆಗೆ ಇವೊತ್ತು ಚರ್ಚೆ ಆರಂಭವಾಗಬಹುದು ಎಂದು ನಿರೀಕ್ಷೆಮಾಡಿದ್ದೆ. ಅದು 4-20ಕ್ಕೆ ಆರಂಭವಾಗುತ್ತಿದೆ ಚಿಂತೆಯಿಲ್ಲ.

ಸ್ವಾಮಿ, ಮಾನ್ಯ ಸಭೆಯ ಮುಂದೆ ಈ ಮಹಾಜನ್ ಕಮಿಷನ್ನಿನ ವರದಿಯ ಪ್ರತಿಗಳು ಇವೆ. ಅವುಗಳನ್ನು ಸದಸ್ಯರಿಗೂ ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಎಲ್ಲಾ ವಿಷಯಗಳನ್ನೂ ವಿವರವಾಗಿ ತಿಳಿದುಕೊಂಡಿದ್ದಾರೆಂದು ನಾನು ನಂಬುತ್ತೇನೆ. ಈ ವಿವರಗಳನ್ನು ಓದುವುದಕ್ಕೆ ಹೋಗಿ ಅಮೂಲ್ಯವಾದ ಕಾಲವನ್ನು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೂ ಸ್ವಲ್ಪ ಮಟ್ಟಿನ ಹಿನ್ನೆಲೆಯನ್ನು ಹೇಳಬೇಕಾಗುತ್ತದೆ. ಭಾಷೆಯ ಆಧಾರದ ಮೇಲೆ ಈ ದೇಶದ ಆಡಳಿತದ ಘಟಕಗಳನ್ನು ಪುನರ್ರಚಿಸಿಕೊಳ್ಳಬೇಕು, ಸಹಸ್ರಾರು ವರ್ಷಗಳ ಹಿಂದೆ ಐತಿಹಾಸಿಕವಾಗಿ ಏರ್ಪಾಡು ಆಗಿರತಕ್ಕಂಥ ರಾಜ್ಯಗಳನ್ನು ಯಾವುದಾದರೂ ಒಂದು ಆಧಾರದ ಮೇಲೆ ಪುನರ್ವಿಂಗಡಣೆ ಮಾಡಬೇಕೆಂಬ ಮಾತು ಈ ದೇಶದ ಮುಂದೆ ಬಹಳ ಹಿಂದೆ ಬಂತು. ಇದು 40-50 ವರ್ಷಗಳ ಹಿಂದಿನ ಮಾತು. ಆಗಿನಿಂದಲೂ ಈ ಬಗ್ಗೆ ಸಾಕಷ್ಟು ಚರ್ಚೆ ಈ ದೇಶದಲ್ಲಿ ನಡೆದಿದೆ. ಆ ನಂತರದಲ್ಲಿ 1921ರ ಸಮಯದಲ್ಲಿ ಕಾಂಗ್ರೆಸ್ ಪಕ್ಷ ರಾಷ್ಟ್ರೀಯ ಹೋರಾಟವನ್ನು ಕೈಗೊಂಡಾಗ ಈ ತತ್ವವನ್ನು ಆಧಾರ ಮಾಡಿ ಭಾಷೆಯ ಆಧಾರದ ಮೇಲೆ, ಕಾಂಗ್ರೆಸ್ಸಿನ ಕ್ರಾಂತಿ ಸಭೆಗಳನ್ನು, ಪ್ರಾದೇಶಿಕ ಸಮಿತಿಗಳನ್ನು ರಚನೆ ಮಾಡಿಕೊಳ್ಳಲು 1942ರಲ್ಲಿ ಬೆಳಗಾಮಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಅಲ್ಲಿಗೆ ಮಹಾತ್ಮ ಗಾಂಧೀಜಿಯವರೇ ಖುದ್ದಾಗಿ ಬಂದು ದೇಶದ ಐಕ್ಯತೆಗೆ, ಬೆಳವಣಿಗೆಗೆ ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ನಿರ್ಮಾಣ ಮಾಡಿಕೊಳ್ಳಬೇಕಾಗುತ್ತದೆ ಎನ್ನುವ ಮಾತು ಆಗ ಪ್ರಸ್ತಾಪ ಆಗಿತ್ತು. ಆ ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ದೇಶದಲ್ಲಿ ಈ ಒಂದು ಮಾತು ಕೃತಿಗೆ ಇಳಿಯಬೇಕು, ರಾಜ್ಯಗಳ ಪುನರ್ವಿಂಗಡಣೆ ಆಗಬೇಕು ಎನ್ನುವ ಬೇಡಿಕೆಯನ್ನು ಕರ್ನಾಟಕದವರು, ಮಹಾರಾಷ್ಟ್ರದವರು ಕೇರಳದವರು, ತಮಿಳು ನಾಡಿನವರು, ಆಂಧ್ರದವರು ಮತ್ತು ಅನೇಕ ಭಾಷೆಯ ಜನರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟರು. ಆಂಧ್ರದಲ್ಲಿ ಪೊಟ್ಟಿ ಶ್ರೀರಾಮುಲು ಎನ್ನುವವರು ಆಮರಣಾಂತ ಉಪವಾಸ ಮಾಡಿ, ಅದರ ಮೇಲೆ ಕೇಂದ್ರ ಸರ್ಕಾರದವರು ಈ ಒಂದು ಭಾಷಾವಾರು ಪ್ರಾಂತ ರಚನೆಗೆ ರೂಪ ಕೊಡಬೇಕಾಗಿ ಬಂತು, ಪಾರ್ಲಿಮೆಂಟಿನಲ್ಲಿ 10-8-1953ರಲ್ಲಿ ಪಂಡಿತ್ ನೆಹರೂ ಅವರು ಒಂದು ಭಾಷಣವನ್ನು ಮಾಡಿದರು. ಅದು ಆದ ಮೇಲೆ 1-10-53ರಲ್ಲಿ ಆಂಧ್ರ ಪ್ರದೇಶ ಆಯಿತು. ಆಗ ನಮಗೆ ಮೊದಲನೆಯದಾಗಿ, ಮೈಸೂರು ರಾಜ್ಯಕ್ಕೆ ಬಳ್ಳಾರಿ ಬಂತು. ಆಗ ನಾವು ಅದನ್ನು ಸ್ವಾಗತ ಮಾಡಿದೆವು.

1953ನೇ ಇಸವಿಯಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರೂ ಇದ್ದರು. ಅವರಿಗೂ ಈ ವಿಷಯ ಗೊತ್ತಿದೆ. ಬಳ್ಳಾರಿ ನಮ್ಮ ರಾಜ್ಯಕ್ಕೆ ಬಂದಾಗ ಕೂಡ ಅನೇಕ ಮಾರ್ಪಾಡುಗಳು ಆದುವು. ಬಳ್ಳಾರಿ ಪೂರ್ತಿ ನಮ್ಮ ಮೈಸೂರಿಗೆ ಬರಲಿಲ್ಲ. ಇದೆಲ್ಲವೂ ತಮಗೆಲ್ಲರಿಗೂ ಗೊತ್ತಿರತಕ್ಕ ವಿಷಯ. ಇದನ್ನು ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಿ ಹೇಳಬೇಕೋ ಅಲ್ಲಿ ಮಾತ್ರ ಹೇಳುತ್ತೇನೆ. ಪ್ರಾಂತಗಳ ರಚನೆಯ ಬೇಡಿಕೆಗಳು ಒತ್ತಾಯವಾಗಿ ದೇಶದ ಮುಂದೆ ಬಂದದ್ದರಿಂದ 29-12-1953ರಲ್ಲಿ ಒಂದು ಉಚ್ಚ ಮಟ್ಟದ ಆಯೋಗವನ್ನು ರಚನೆ ಮಾಡತಕ್ಕ ತೀರ್ಮಾನವನ್ನು ಕೇಂದ್ರ ಸರ್ಕಾರದವರು ಕೈಗೊಂಡರು. ಅದೇ ಈಗಲೂ ಖ್ಯಾತ ಪ್ರಖ್ಯಾತವಾಗಿರತಕ್ಕ ಎಸ್. ಆರ್. ಸಿ. ಕಮಿಷನ್ ಅದರಲ್ಲಿ ಇದ್ದಂತಹ ಫಜಲ್ ಅಲಿ ಅವರಾಗಲೀ, ಫಣಿಕರ್ ಆಗಲೀ ಇವೊತ್ತು ಇಲ್ಲ. ಕುಂಜ್ರು ಅವರು ಒಬ್ಬರು ಇದ್ದಾರೆ. ಇಬ್ಬರು ನಿಧನ ಹೊಂದಿದ್ದಾರೆ. ಅವರು ಈ ಒಂದು ಮಹಾನ್ ಕೆಲಸವನ್ನು ಮಾಡಿದರು. ದೇಶದಲ್ಲಿ ಹೋರಾಟ ಮಾಡಿ ಬಹಳ ಕಷ್ಟಪಟ್ಟು ಅವರು ಒಂದು ವರದಿಯನ್ನು ಕೊಟ್ಟರು. ಒಂದು ತತ್ವವನ್ನು ನಿರೂಪಣೆ ಮಾಡಿದರು. ಆಮೇಲೆ 1956ರಲ್ಲಿ ಪಾರ್ಲಿಮೆಂಟಿನಲ್ಲಿ ಈ ವರದಿಯ ಮೇಲೆ ಚರ್ಚೆ ನಡೆದು ಕಾನೂನು ರೂಪವನ್ನು ಪಡೆಯಿತು. ಅದು ಆದ ಮೇಲೆ ಈ ರಾಜ್ಯಗಳು ರೂಪಗೊಂಡು ಅಸ್ತಿತ್ವಕ್ಕೆ ಬಂದವು. ಎಸ್. ಆರ್. ಕಮಿಷನ್ನಿನ ಸಲಹೆ ಪ್ರಕಾರ ಆಗಿರತಕ್ಕ ಈ ನಮ್ಮ ಕರ್ಣಾಟಕ ರಾಜ್ಯವು ಅಪೂರ್ಣವಾಗಿದೆ. ನಮಗೆ ನ್ಯಾಯ ದೊರಕಿಸಿಕೊಟ್ಟಿಲ್ಲ. ನಮ್ಮ ಎಷ್ಟೋ ಲಕ್ಷ ಜನ ಕನ್ನಡಿಗರು ಗಡಿ ಭಾಗದಲ್ಲಿ ಹೊರಗಡೆ ಉಳಿದಿದ್ದಾರೆ ನಮಗೆ ಅನ್ಯಾಯವಾಗಿದೆ ಎನ್ನುವ ಮಾತನ್ನು ನಾನು ಹಿಂದೆ ಹೇಳಿದ್ದೇನೆ. ಎಸ್.ಆರ್.ಸಿ. ವರದಿಯು ಚರ್ಚೆಯಾಗುವಾಗ ಮೈಸೂರಿನಲ್ಲಿ ಸಭೆಯನ್ನು ಕರೆದಿದ್ದರು. ಆಗ ಈ ವಿಷಯದಲ್ಲಿ ಮಾತನಾಡುತ್ತಾ, ನಮ್ಮ ಕ್ಲೈಮ್ಸ್ ನಮ್ಮ ರಾಜ್ಯದ ಹೊರಗಡೆ ಏನಿವೆಯೋ ಅವು ಅಚ್ಚ ಕನ್ನಡ ಭಾಗಗಳು ಇವೆ ಎಂದು ನಾನು ಹೇಳಿರಬಹುದು. ಹೀಗೆ ಬೇರೆ ಬೇರೆ ಸಂಸ್ಥೆಗಳು, ಸಾಹಿತ್ಯ ಪರಿಷತ್ತು, ಇವುಗಳು ಗಡಿನಾಡಿನಲ್ಲಿರತಕ್ಕ ಜನರು ಇನ್ನೂ ಕರ್ಣಾಟಕಕ್ಕೆ ಸೇರಬೇಕು ಎನ್ನುವ ಅಭಿ

ಪ್ರಾಯವನ್ನು ಆಗಿಂದಾಗ್ಗೆ ಸಮ್ಮೇಳನಗಳ ಮೂಲಕ, ಮನವಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಕ್ಕೆ ರಾಜ್ಯದ ವಿಧಾನ ಸಭೆಗೆ ಮತ್ತು ರಾಜ್ಯದ ರಾಜಕೀಯ ಮುಖಂಡರಿಗೆ ಸಲ್ಲಿಸುತ್ತಾ ಬಂದಿದ್ದಾರೆ. ಈಗಲೂ ಆಂಥೋಳನಗಳು ನಡೆಯುತ್ತಾ ಇವೆ.

4-30 P.M.

ಅದು ಆದಮೇಲೆ ಮಹಾರಾಷ್ಟ್ರದವರು ಮಾತ್ರ 1956ರ ನಂತರ ಮುಂಬಯಿ ರಾಜ್ಯವನ್ನು bilingual state ಮಾಡಿದ್ದಕ್ಕೆ ಹೋರಾಟ ಮಾಡಿ unilingual state ಆಗಬೇಕು ಎಂದು ಹೇಳಿದರು. ಅಲ್ಲದೆ ಕರ್ನಾಟಕ ರಾಜ್ಯದಲ್ಲಿ ನಮಗೆ ಸೇರಬೇಕಾದ ಭಾಗ ಉಳಿದುಹೋಗಿದೆ ಅದು ತಮಗೆ ಬರಬೇಕು ಎಂದು ಒಂದು ಡಿಸ್ಪ್ಯೂಟ್ ರೇಜ್ ಮಾಡಿದರು. ಪಾರ್ಲಿಮೆಂಟಿನ ಮುಂದೆ ಎಲ್ಲಾ ಬೇಡಿಕೆಗಳನ್ನೂ ಇಟ್ಟು, ಪ್ರತಿಯೊಂದನ್ನೂ ಚರ್ಚೆ ಮಾಡಿ ವೋಟು ತೆಗೆದುಕೊಂಡು ಮಾಡಿದ್ದು ಆಯಿತು. ಬೆಳಗಾಂ, ನಿಪ್ಪಾಣಿ ಕೇಳಿದ್ದಕ್ಕೆ ಚರ್ಚೆಯಾಗಿ ಪಾರ್ಲಿಮೆಂಟು ಅದನ್ನು ಏಕಮತವಾಗಿ ತೀರ್ಮಾನ ಮಾಡಿದೆ. ಮಹಾರಾಷ್ಟ್ರದವರು ಅದು ಸಾಧ್ಯವಿಲ್ಲ, ಈ ಭಾಗ ಪಡಕೊಳ್ಳಬೇಕು, ಇದು ನಮಗೆ ಸೇರಬೇಕು ಎಂಬ ವಾದ ಇಟ್ಟರು ಮತ್ತು 1957ರಿಂದ 1966ರವರೆಗೆ ಒಂದೇ ಸಮನೇ ಚಳವಳಿ ನಡೆದಿದೆ. ಇದು ಆದಮೇಲೆ ಇತ್ತೀಚಿನ ಘಟನೆಗಳು ಕಣ್ಣಿಗೆ ಕಟ್ಟಿದಂತೆ ಇವೆ. ಎಸ್.ಆರ್.ಸಿ. ವರದಿ ಪ್ರಕಾರ ಎಸ್.ಆರ್. ಆಕ್ಟ್ ಪ್ರಕಾರ ನಮ್ಮ ರಾಜ್ಯಕ್ಕೆ ಬಂದಂಥ 814 ಹಳ್ಳಿಗಳನ್ನು ಮಹಾರಾಷ್ಟ್ರದವರು ಹೇಳುತ್ತಾರೆ. ಈ ಒಂದು ಬೇಡಿಕೆ ಬಹಳ ಉಗ್ರವಾದ ರೀತಿಯಲ್ಲಿ ಚಳುವಳಿ ರೂಪದಲ್ಲಿ ನಡೆಯಿತು. ಮಹಾರಾಷ್ಟ್ರದವರ ಬೇಡಿಕೆಗೆ ಆಧಾರ ಏನು ಅಂದರೆ, ಪಾಟಸ್ಕರ್ ಸೂತ್ರದ ಅನ್ವಯ ಇಷ್ಟು ಹಳ್ಳಿಗಳು ತಮಗೆ ಬರಬೇಕು ಎಂದು ಹೇಳುತ್ತಾರೆ. ಪಾಟಸ್ಕರ ಸೂತ್ರ ಅಂದರೆ ಹಳ್ಳಿ ಘಟಕವಾಗಿ ಇಟ್ಟುಕೊಂಡು ವಿಭಜನೆ ಮಾಡಿಕೊಳ್ಳಬೇಕು. ಆಂಧ್ರ ಮದ್ರಾಸ್ ವಿಭಜನೆಯಾಗುವ ಮುನ್ನ ಮದ್ರಾಸಿನಲ್ಲಿ ಆಂಧ್ರ ಇತ್ತು. ಈ ಗಡಿ ವಿವಾದವನ್ನು ಪರಸ್ಪರ ಒಪ್ಪಿಕೊಂಡು ಹಳ್ಳಿಯನ್ನು ಘಟಕವಾಗಿ ಇಟ್ಟುಕೊಂಡು ಅವರು ಹಂಚಿಕೊಂಡು ಒಂದು ಗೆರೆ ಎಳೆದರು. ಇದು ಪಾಟಸ್ಕರ ಸೂತ್ರ. ಆದರೆ ಮಹಾರಾಷ್ಟ್ರ ಗುಜರಾತ ಮಧ್ಯೆ ಗಡಿ ವಿವಾದ ಬಂದಾಗ್ಗೆ ಮಹಾರಾಷ್ಟ್ರದವರು ಹಳ್ಳಿ ಘಟಕ ಎಂದು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿರಲಿಲ್ಲ. ಆದರೆ ಈಗ ಪಾಟಸ್ಕರ ಸೂತ್ರ ಪ್ರಕಾರ ತೀರ್ಮಾನವಾಗಬೇಕು ಎಂದು ಹೇಳುತ್ತಾರೆ. ಎಸ್.ಆರ್.ಸಿ. ಅವರು ಜಿಲ್ಲೆಯನ್ನು ಒಂದು ಘಟಕವಾಗಿ ಇಟ್ಟುಕೊಳ್ಳೋಣ, ಜಿಲ್ಲೆ ಒಡೆಯುವುದು ಬೇಡ, ತಾಲ್ಲೂಕವರೆಗೆ ಬೇಕಾದರೆ ಹೋಗೋಣ ಎಂದು ಫಿರ್ಕಾವರೆಗೆ ಹೋಗಿದ್ದಾರೆ. ಮಹಾರಾಷ್ಟ್ರದವರ ವಾದ ಏನು ಅಂದರೆ, ಹಳ್ಳಿ ಒಂದು ಘಟಕವಾಗಬೇಕು ಎಂಬುದು ಒಂದು ವಾದ. ಎರಡನೇ ವಾದ ಏನು ಅಂದರೆ, ಗಡಿ ಪ್ರಶ್ನೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಒಂದೇ ಸಮನೇ ಚುನಾವಣೆಗಳಲ್ಲಿ ಸ್ಥಾನಗಳಿಸಿದ್ದಾರೆ, ಜನ ಅವರಿಗೆ ವೋಟು ಕೊಟ್ಟು ಕಳಿಸಿದ್ದಾರೆ, ಆದುದರಿಂದ ಈ ಪ್ರದೇಶ ಮಹಾರಾಷ್ಟ್ರದಲ್ಲಿ ಸೇರಬೇಕು ಎಂದು. ಮತ್ತೊಂದು ವಾದ ಅವರು ಬಹು ಸಂಖ್ಯಾಕರಾಗಿದ್ದಾರೆ. ಶೇಕಡ 51 ಆದರೆ ಅವರು ಬಹು ಸಂಖ್ಯಾತರು. ಎಸ್ಸಾರ್ಸಿಯಲ್ಲಿ ಶೇಕಡ 76 ಇರಬೇಕು ಎಂದು ಹೇಳಿದೆ. ಬರೀ ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡಬಾರದು, ಕಂಟಿಗ್ಯುಯಿಟಿ ಇರಬೇಕು, ಆಡಳಿತ ಸೌಕರ್ಯ ಇರಬೇಕು, ಹೋಮೋಜಿನಿಟಿ ಇರಬೇಕು ಎಂದು ಹೇಳಿದೆ. ನೆಹರು ಅವರೂ ಸಹ ಹೇಳಿದ್ದಾರೆ, ಎಸ್ಸಾರ್ಸಿ ಹೇಳಿದ್ದಾರೆ, ಇದನ್ನು ಎಲ್ಲರೂ ಹೇಳಿದ್ದಾರೆ. ರಾಜ್ಯಗಳನ್ನು ಬರೀ ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡುವುದಕ್ಕಾಗುವುದಿಲ್ಲ ಎಂದ . ಬೇರೆ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆ ಭಾಗಗಳ ಅಭಿವೃದ್ಧಿಯಾಗಬೇಕು, ಜನಗಳ ಏಳಿಗೆಯಾಗಬೇಕು, ಜನ ಸುಖದಿಂದ ಉಪಜೀವನ ಮಾಡಬೇಕು ಎಂಬ ಒಂದು ತತ್ವ ಮೊದಲು ಪ್ರತಿಪಾದನೆಯಾಗಿದೆ. ಈ ಘರ್ಷಣೆಗಳು ನಡೆಯುತ್ತಾ ಇರುವಾಗ ಶ್ರೀಮಾನ್ ನಿಜಲಿಂಗಪ್ಪನವರು ಆಗ್ಗೆ ಮಹಾರಾಷ್ಟ್ರದಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಚವಾಣ ಅವರಿಗೆ ಒಂದು ಪತ್ರ ಬರೆದು ಇದನ್ನು ತಿಳಿಸಿದ್ದಾರೆ, ಭಾರತ ಒಂದು ದೇಶ, ಅದರ ಐಕ್ಯತೆ ಕಾಪಾಡಿಕೊಳ್ಳುವುದು ನಮ್ಮ ಜವಾಬ್ದಾರಿ. ಸಣ್ಣ ಪುಟ್ಟ ತಂಟೆಗಳಿದ್ದರೆ ನಾವು ಕುಳಿತು ಚರ್ಚೆಮಾಡಿ ಬಗೆಹರಿಸೋಣ ಎಂದು ಬರದಿದ್ದಕ್ಕೆ ಅವರು ಅದನ್ನು ಒಂದು ದೃಷ್ಟಿಯಿಂದ ಒಪ್ಪಿಕೊಂಡಿದ್ದಾರೆ. ಆದರೆ ಚಳುವಳಿ ನಿಲ್ಲಲಿಲ್ಲ. ಸ್ವಾಮಿ, ಇದಾದಮೇಲೆ ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದರು. ಅವರು ಒಂದು ನಿಲುವನ್ನು ತೆಗೆದುಕೊಂಡರು. ಎಸ್ಸಾರ್ಸಿವರದಿ ಕೊಟ್ಟಮೇಲೆ ಸಾರ್ವಭೌಮ ಅಧಿಕಾರವುಳ್ಳ ಪಾರ್ಲಿಮೆಂಟಿನಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿ ಎರಡೂ ಪಕ್ಷಗಳಿಗೆ ಸಮಾಧಾನವಾಗುವ ಹಾಗೆ ಕಾನೂನನ್ನು ರಚನೆ ಮಾಡಿ ಆ ಆಧಾರದ ಮೇಲೆ ರಾಜ್ಯಗಳನ್ನು ಮಾಡಿಕೊಂಡಿದ್ದೇವೆ. ಪುನಃ ಪುನಃ ಅದನ್ನು ಕೆದಕುವುದು ಬೇಡ ಎಂದು ಒಂದು ತೀರ್ಮಾನಕ್ಕೆ ಬಂದಿದ್ದೇವೆ, ಸಣ್ಣ ಪುಟ್ಟ ಹೊಂದಾಣಿಕೆಗೆ ನಾವು ತಯಾರಿದ್ದೇವೆ ಎಂದು ಹೇಳಿದರು. ಸಣ್ಣ ಪುಟ್ಟ ಹೊಂದಾಣಿಕೆ ಅರ್ಥ ಹೇಳಿಲ್ಲ.

ಶ್ರೀ ಬಿ. ಡಿ. ಜತ್ತಿ.—ಹತ್ತು ಮೈಲಿ belt ಎಂದು ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಸಣ್ಣ ಪುಟ್ಟ ಹೊಂದಾಣಿಕೆಯ ಬಗ್ಗೆ ಎಸ್ಸಾರ್ಸಿ ವರದಿ ಮೇಲೆ ಆಕ್ಟ್ ಆಗುವಾಗ್ಗೆ ಆಗ್ಗೆ ಗೃಹ ಮಂತ್ರಿಗಳಾಗಿದ್ದ ಪಂತ್ ಅವರು ಹೇಳಿದ್ದಾರೆ. ಅದರಲ್ಲಿ ಸೆಕ್ಷನ್ 21 (2)ನಲ್ಲಿ ಝೋನಲ್ ಕೌನ್ಸಿಲ್—ವಲಯ ಮಂಡಲಿ ಪ್ರೊವೈಡ್ ಮಾಡಿದ್ದಾರೆ. ನಮ್ಮ ವರಿಗೆ ಸಮರ್ಥನೀಯವಾದ ರೀತಿಯಲ್ಲಿ ತಮ್ಮ ಕೆಲಸ ಸಾಧಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಈ ವಿಷಯದಲ್ಲಿ ಏನು ತೀರ್ಮಾನವಾಗಬೇಕಾಗಿತ್ತೋ ಅದು ಬರಲಿಲ್ಲ. ಅವರು ಹೇಳಿದ್ದು ಏನು ಅಂದರೆ :

> "Zonal Councils have been authorised to deal with all these boundary matters pertaining to re-adjustment of territories lying in the borders of the State. It should be possible for the States concerned to settle these minor differences between themselves."

ರಾಜ್ಯ ಸರಕಾರಗಳು ಚರ್ಚೆ ಮಾಡಿ ತಮ್ಮ ತಮ್ಮಲ್ಲಿ ಸಣ್ಣ ಪುಟ್ಟ ಹೊಂದಾಣಿಕೆಗಳು ಆಗಬೇಕು ಎಂದು ಹೇಳುತ್ತಾ ಇದ್ದರು. ಮಹಾರಾಷ್ಟ್ರದವರು ಭಾಷಾಬಾಹುಳ್ಯದ ಮೇಲೆ ಹಳ್ಳಿ ಘಟಕ ಇಟ್ಟು ಕೊಂಡು ಆಗಬೇಕು ಬೇರೆ ತಿದ್ದುಪಡಿಗೆ ಒಪ್ಪುವುದಿಲ್ಲ ಎಂದು ಹೇಳಿದರು. ಇದನ್ನು ನಾನು ಹಿನ್ನೆಲೆ ಯಾಗಿ ಎಲ್ಲರ ಗಮನಕ್ಕ ತಂದಿದ್ದೇನೆ. ಇದು ಆದಮೇಲೆ ನಮ್ಮ ಸರಕಾರದ ನಿಲುವು ಹೇಳುತ್ತೇನೆ. ಈ ಗೊಂದಲವಾದ ಮೇಲೆ ಬಹುಶಃ ಹಳ್ಳೀಕೇರಿ, ಜತ್ತಿ ಅವರು ಚಳವಳಿ ಮಾಡುವುದಕ್ಕೆ ಹೋಗಿದ್ದರು ಎಂದು ಕಾಣುತ್ತದೆ. ಅದು ಒಂದು ದೊಡ್ಡ ಆಂದೋಲನ ನಡೆಯಿತು. ಆದರೂ ಕೂಡ ಮಹಾರಾಷ್ಟ್ರದ ಒತ್ತಾಯಕ್ಕೆ ಮಣಿದು ಒಂದು ಏಕ ಸದಸ್ಯ ಕಮಿಷನ್ ನೇಮಕ ಮಾಡುತ್ತೇವೆ ಎಂಬ ಒಂದು ದೊಡ್ಡ ಸುದ್ದಿ ದೇಶದಲ್ಲಿ ಬಂತು. ಆಗ ಬಹಳ ಜನ ನಮ್ಮ ಕಾಂಗ್ರೆಸ್ ಮಿತ್ರರು ಬೆಳಗಾಂನಲ್ಲಿ ರೈಲುಗಳನ್ನು ತಡೆದು ತಮ್ಮ ಒಂದು ರಾಜ್ಯದ ಪ್ರೇಮವನ್ನು ವ್ಯಕ್ತ ಪಡಿಸಿದರು. ಮತ್ತು ಆ ಬಗ್ಗೆ ಹೋರಾಟ ಮಾಡಿದರು.

ಶ್ರೀ ಎಸ್. ಡಿ. ಕೊತಾವಳೆ.—ಬೇರೆ ಪಕ್ಷದವರು ಸಹ ಹೋರಾಟ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಹೋರಾಟದ ಜೊತೆಗೆ ಪ್ರತಿಭಟನೆಯನ್ನು ಸಹ ಮಾಡಿದ್ದಾರೆ. ಎಸ್.ಆರ್.ಸಿ. ಅವರು ಕೊಟ್ಟಿರುವ ತೀರ್ಮಾನವೇ ಕೊನೆಯದು, ಮತ್ತೆ ಗಡಿಯಬಗ್ಗೆ ಪ್ರಶ್ನೆ ಮಾಡಬಾರದೆಂದು, ಮಾಡಿದರೆ ಅನಾಹುತವಾಗುತ್ತದೆಂದು ತಾವುಗಳು ಪ್ರತಿಭಟನೆ ಮಾಡಿದಿರಿ. ಆದರೂ ಸಹ ಒಂದು ಮೆಟ್ಟಲು ಕೆಳಗಿಳಿದು ಏಕ ಸದಸ್ಯ ಆಯೋಗದ ನೇಮಕಕ್ಕೆ ಒಪ್ಪಿದಿರಿ. ತಾರೀಖು 23ನೇ ಮೇ 1966ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಈ ರೀತಿ ನಿರ್ಣಯವನ್ನು ತೆಗೆದು ಕೊಂಡರು :

> "On May 23, 1966 the Congress Working Committee decided that a One-Man Commission should be appointed by the Government of India to decide the boundary disputes between Maharashtra and Mysore and Mysore and Kerala".

ಇದೂ ಎಲ್ಲರಿಗೂ ಗೊತ್ತಿರುವಂತೆ ಮಹಾರಾಷ್ಟ್ರದ ಮುಖಂಡರ ಒಂದು ಒತ್ತಾಯದಿಂದ ನಿರ್ಣಯ ಮಾಡಲ್ಪಟ್ಟಿತು. ಈ ರೀತಿ ನಿರ್ಣಯ ಮಾಡಿದಮೇಲೆ ನಿರ್ಣಯದ ವಿರುದ್ಧ ನಮ್ಮ ರಾಜ್ಯದಲ್ಲಿ ಬಹಳ ಪ್ರತಿಭಟನೆ ನಡೆಯಿತು. ಅದರ ಮೇರೆಗೆ ತಾರೀಖು 5-7-1966ರಲ್ಲಿ ಪುನಃ ಪರಿಶೀಲನೆ ಮಾಡಲಾಯಿತು. ಶ್ರೀ ನಿಜಲಿಂಗಪ್ಪನವರು ಮತ್ತು ಶ್ರೀ ನಾಯಕರು ಒಂದೆಡೆ ಕುಳಿತು ಚರ್ಚೆ ಮಾಡಬೇಕೆಂದು ತೀರ್ಮಾನವಾಯಿತು. ಆಗ ಶ್ರೀ ನಾಯಕರು ಹೆದರಿಸಿದರು, ಈ ಒಂದು ನಿರ್ಣಯವನ್ನು ಒಪ್ಪದೆ ಹೋದರೆ ಬಹಳ ಕೆಟ್ಟ ಪರಿಣಾಮವನ್ನು ಎದುರಿಸಬೇಕಾಗುತ್ತದೆಂದು. ಈ ಬಗ್ಗೆ ಶ್ರೀ ಚವಾಣ್ ಅವರು ಸಹ ಒಂದು ಎಚ್ಚರಿಕೆಯನ್ನು ದೇಶಕ್ಕೆ ಕೊಟ್ಟರು. ತಾರೀಖು 9-10-1966ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಈ ಬಗ್ಗೆ ಪುನಃ ಚರ್ಚೆ ಮಾಡಿ ಎಲ್ಲರೂ ಒಂದು ತೀರ್ಮಾನಕ್ಕೆ ಬಂದರು. ಅಲ್ಲಿ ಆದ ನಿರ್ಣಯ ಈ ರೀತಿ ಇದೆ :

> "Taking into consideration the fundamental basis of the reorganisation of States in India and with a view to solving the

existing border disputes between the States of Maharashtra and Mysore and the States of Mysore and Kerala, the Working Committee requests the Government to set up a Commission which shall hear concerned parties and give its final decision''.

ಒಂದು ದೃಷ್ಟಿಯಿಂದ ಗಡಿ ಸಮಸ್ಯೆ ಎನ್ನುವುದು ಕಾಂಗ್ರೆಸ್ ಪಕ್ಷ ಹುಟ್ಟು ಹಾಕಿದಂಥ ಘೋರ ಸಮಸ್ಯೆಯಾಗಿದೆ. ಗಡಿ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಮತ್ತೆ ಒಂದು ಕಮಿಷನ್ ನೇಮಕವಾಯಿತು. ಇಲ್ಲಿ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ: ನಮ್ಮ ರಾಜ್ಯದ ವಿರೋಧ ಪಕ್ಷದ ಸದಸ್ಯರೆಲ್ಲರೂ ಸೇರಿ ಚರ್ಚೆ ಮಾಡಿ, ಸಮ್ಮೇಳನ ಮಾಡಿ ತಮ್ಮ ಬೇಡಿಕೆಯನ್ನು ಸಲ್ಲಿಸಿದ್ದಾರೆ, ಏನೆಂದರೆ ನಮಗೂ ಮಹಾರಾಷ್ಟ್ರದವರಿಗೂ ಗಡಿ ವಿವಾದ ಎನ್ನುವುದು ಇಲ್ಲ. ಆದರೆ ಕರ್ನಾಟಕ ರಾಜ್ಯಕ್ಕೆ ಬರಬೇಕಾದ ಬೇರೆ ಬೇರೆ ಭಾಗಗಳು ಏನಿವೆ, ಆ ಎಲ್ಲಾ ಭಾಗಗಳನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ಒಂದು ಉಚ್ಚ ಅಯೋಗವನ್ನು ನೇಮಿಸಬೇಕು. ನೇಮಕ ಮಾಡುವ ಅಯೋಗವನ್ನು ಒಂದು ನಿರ್ದಿಷ್ಟ ಟರ್ಮ್ಸ್ ಆಫ್ ರೆಫರೆನ್ಸ್ ಮೇಲೆ, ಒಂದು ತತ್ವದ ಆಧಾರದಮೇಲೆ ರಚನೆ ಮಾಡಬೇಕು, ಆ ರೀತಿ ನೇಮಕ ಮಾಡವುದಾದರೆ ನಮ್ಮ ಅಭ್ಯಂತರವಿಲ್ಲವೆಂದು ಹೇಳಿದ್ದೇವೆ. ವಿರೋಧಪಕ್ಷದವರು ಮಾಡಿದ ನಿಲುವೇ ರಾಜ್ಯ ಸರ್ಕಾರದವರು ಮಾಡಿದ ನಿಲುವಾಗಿತ್ತು. ಸರ್ಕಾರದವರು ಗಡಿ ಬಗ್ಗೆ ಆಯೋಗ ನೇಮಕವಾಗಬಾರದು ಎಂಬ ಬಗ್ಗೆ ಒಂದು ಹೇಳಿಕೆ ರೂಪದಲ್ಲಿ ಪುಸ್ತಕವನ್ನು ಮುದ್ರಿಸಿದ್ದಾರೆ. ಅದರಲ್ಲಿ ಈ ರೀತಿ ಹೇಳಿದೆ:

"The consensus of opinion in the Mysore State is that all questions relating to boundaries should be decided simultaneously and not piecemeal. There are Kannada speaking areas besides those mentioned in paragraph 14 of the Memorandum referred to above included in the different adjoining States, namely Kasargod in Kerala, Talawadi in Coimbatore District, Hosur, parts of Nilgiris in Madras and Madakasira in Anantapur district besides Kannada speaking areas of Adoni and Rayadurga".

ಹೆಚ್ಚು ಕಡಿಮೆ ವಿರೋಧಪಕ್ಷದವರ ನಿಲುವು ಸಹ ಇದೇ ಆಗಿತ್ತು. ಕೇಂದ್ರ ಸರ್ಕಾರದವರು ಮಹಾರಾಷ್ಟ್ರದವರ ಒತ್ತಾಯಕ್ಕೆ ಮಣಿದು ಏಕ ಸದಸ್ಯ ಅಯೋಗವನ್ನು ನೇಮಕ ಮಾಡಬಾರದು ಎಂದು ನಮ್ಮ ರಾಜ್ಯ ಸರ್ಕಾರದವರು ಹೇಳುತ್ತಿದ್ದರೂ ಕೂಡ, ಕೊನೆಗೆ ಏಕ ಸದಸ್ಯ ಆಯೋಗಕ್ಕೆ ನಮ್ಮ ಶ್ರೀ ನಿಜಲಿಂಗಪ್ಪನವರು ಒಪ್ಪಿಕೊಂಡು ಬಂದರು. ಇದಕ್ಕೆ ಮೊದಲು ಮುಖ್ಯ ಮಂತ್ರಿಗಳು ವಿರೋಧಪಕ್ಷದ ಸದಸ್ಯರುಗಳನ್ನು ಗಡಿ ಪ್ರಶ್ನೆ ಬಗ್ಗೆ ಮಾತನಾಡಲು ಕರಿಸಿಕೊಂಡು ನಮಗೆಲ್ಲಾ ಹೇಳಿದರು, ಏಕ ಸದಸ್ಯ ಅಯೋಗಕ್ಕೆ ಒಪ್ಪುವುದಿಲ್ಲವೆಂದು. ನಂತರದ ಒಪ್ಪಿಕೊಂಡರು. ಆ ರೀತಿ ಒಪ್ಪಿಕೊಂಡ ನಂತರ ಟರ್ಮ್ಸ್ ಆಫ್ ರೆಫರೆನ್ಸ್ ಬಗ್ಗೆ ಅವರು ಹೆಚ್ಚಿನ ಪ್ರಯತ್ನ ಮಾಡಲಿಲ್ಲ. ಕೇವಲ ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ವಿವಾದವಾಗಬಾರದು ಎಂದು ಅದಕ್ಕೆ ಕಾಸರಗೋಡನ್ನು ಸಹ ಸೇರಿಸಿದರು. ತಾರೀಖು 10-10-1966ರಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಈ ರೀತಿಯ ಒಂದು ಹೇಳಿಕೆಯನ್ನು ಕೊಟ್ಟರು, ಅದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಏನೆಂದರೆ:

"Mr. Naik further stated that the verdict of the Commission would be binding not only on both the States but on the Union Government as well".

ಈ ಗಡಿ ಬಗ್ಗೆ ಆಗಿನ ಗೃಹಮಂತ್ರಿಗಳಾಗಿದ್ದ ಶ್ರೀ ನಂದಾ ಅವರು ಸಹ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ; ಏನೆಂದರೆ:

"The problem has been solved completely"

ಈ ರೀತಿ ಪ್ರತಿಯೊಬ್ಬರೂ ಹೇಳಿದ್ದಾರೆ. ಒಂದು ದೃಷ್ಟಿಯಿಂದ ಇದು ಕಾಂಗ್ರೆಸ್ ಪಕ್ಷದ ತೀರ್ಮಾನವಾಗುತ್ತದೆ. ಅವರದ್ದೇ ಕೇಂದ್ರದಲ್ಲಿ ಸರ್ಕಾರವಿರುವುದರಿಂದ, ನಾನು ಹೇಳುತ್ತೇನೆ.

(ಶ್ರೀ ಎಸ್. ಗೋಪಾಲಗೌಡ)

ಶ್ರೀ ಚವಾಣ್ ಅವರಾಗಲೀ, ಶ್ರೀ ನಾಯಕ ಅವರಾಗಲೀ, ಶ್ರೀ ನಿಜಲಿಂಗಪ್ಪನವರಾಗಲೀ ಮತ್ತೆ ಯಾರೇ ಆಗಲೀ ತಮ್ಮ ಸ್ಥಾನಕ್ಕೆ ಕಟ್ಟು ಬೀಳಬೇಕಾದುದು ಅವಶ್ಯಕವಿತ್ತು. ದುರದೃಷ್ಟವಶಾತ್ ಮಹಾರಾಷ್ಟ್ರದ ನಾಯಕರು ಕಾಡಿ ಬೇಡಿ ಶ್ರೀ ಬಾಪಟ್ ಅವರನ್ನು ಮುಖ್ಯ ಮಂತ್ರಿಗಳ ನಿವಾಸದಲ್ಲಿ ಉಪವಾಸ ಕುಳ್ಳಿರಿಸಿ, ಅವರಲ್ಲಿಗೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ಕರೆದುಕೊಂಡು ಹೋಗಿ ತೋರಿಸಿ, ಗಡಿ ಆಯೋಗದ ರಚನೆಗೆ ಆಶ್ವಾಸನೆ ತೆಗೆದುಕೊಂಡರು. ಅದು ಸಿಕ್ಕುತ್ತದೆಂದು ಹೇಳಿದರು, ತೆಗೆದುಕೊಂಡವರು ಅವರು. ಬೆಳಗಾಂ ನಗರ, ಕಾರವಾರ, ಸೂಪ, ಹಳಿಯಾಳ ಇವೆಲ್ಲವೂ ನಮಗೆ ಸಿಕ್ಕಲಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಅವರು ಒಪ್ಪುವುದಿಲ್ಲ ಎಂದು ಹೇಳುವುದು ನನಗೆ ಶೋಚನೀಯವಾಗುತ್ತದೆ. ನಾನು ಮೊದಲೇ ಹೇಳಿದ್ದೇನೆ. ಈ ರಾಜ್ಯದ ವಿರೋಧ ಪಕ್ಷದವರು ಯಾರೂ ಅಧಿಕೃತವಾಗಿ ಮಹಾಜನ ಕಮೀಷನ್ ನೇಮಕವನ್ನು ಸ್ವಾಗತಿಸಲಿಲ್ಲ ಎಂದು. ನಾವು ಬಹಿಷ್ಕರಿಸಬೇಕು ಎಂದು ಮಾಡಿ ಬಹಿಷ್ಕರಿಸಿದ್ದೇವೆ. ನಾವು ಅವರ ಮುಂದೆ ಸಾಕ್ಷಿ ನೀಡಲಿಲ್ಲ.

Sri P. V. AITHALA.—Such a grave problem is being discussed, there is no minister in this house.

ಶ್ರೀ ಎಚ್. ಸಿದ್ದವೀರಪ್ಪ.—ಹೊರಗೆ ಏನು ಅಂದರೂ ಭಯವಿಲ್ಲ. ನಮಗೆ ಗಂಟಲು ಒಣಗಿಸಿಕೊಳ್ಳುವುದು ಬೇಡ ಎಂದರೆ ಮನೆಗೆ ಹೋಗೋಣ. ಇದು ದೇಶದ ಪ್ರಶ್ನೆ. ದೇಶ ನಮಗೆ ಏನು ಅಂದಾರು ? ನಮ್ಮ ಅಭಿಪ್ರಾಯ ತಿಳಿಸಬೇಕು ಎಂದು ನಾವು ಆತ್ಮ ತೃಪ್ತಿಗಾಗಿ ಮಾತನಾಡುತ್ತಿದ್ದೇವೆ. ಮಂತ್ರಿಗಳ ಮೇಲಿನ ಗೌರವಕ್ಕಾಗಿ ಮಾತನಾಡುತ್ತಾ ಇಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಈಗ ಇಷ್ಟು ವರದಿ ಬಂದ ಮೇಲೆ ಶ್ರೀಮಾನ್ ಚವ್ಹಾಣರೇ ಆಗಲಿ, ಮಹಾರಾಷ್ಟ್ರದ ಮುಖ್ಯಮಂತ್ರಿಗಳೇ ಆಗಲಿ ಮಹಾರಾಷ್ಟ್ರದ ಏಕೀಕರಣ ಸಮಿತಿಯವರೇ ಆಗಲಿ ಅದನ್ನು ವಿರೋಧ ಮಾಡುವುದಾಗಲಿ ಅಥವಾ ಒಪ್ಪುವುದಿಲ್ಲ ಎಂದಾಗಲಿ ಹೇಳಿದರೆ ಅದು ತಪ್ಪಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಸರ್ಕಾರದವರು ನಾನು ಹೇಳಿದ ಹಾಗೆ ಸಣ್ಣಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು ಎಂದು ಹೇಳಿದವರು ಒಂದು ತೀರ್ಮಾನಕ್ಕೆ ಅಂಟಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಅಲ್ಲಿಂದ ಒಂದು ಮೆಟ್ಟಲು ಕೆಳಗಿಳಿದರು. ಕೇವಲ ಮಹಾರಾಷ್ಟ್ರ ಮೈಸೂರು ಗಡಿ ವಿವಾದದ ಸಂಬಂಧದಲ್ಲಿ ಆಯೋಗ ರಚನೆ ಆಗಬಾರದು ಎಂದು ಹೇಳಿದವರು ಕಾಸರಗೋಡನ್ನು ಸೇರಿಸಿದ್ದಾರೆ ಎಂಬ ನೆಪ ಮುಂದೆ ಮಾಡಿ ಅದನ್ನು ಒಪ್ಪಿಕೊಂಡರು. ಶ್ರೀಮಾನ್ ನಿಜಲಿಂಗಪ್ಪನವರು ವರದಿಯನ್ನು ಒಪ್ಪಿಕೊಂಡದ್ದೂ ಅಲ್ಲದೆ ಇನ್ನೂ ಅದು ಹೊರಗೆ ಬರುವುದಕ್ಕಿಂತ ಮುಂಚಿತವಾಗಿ ನಾವು ಅದನ್ನು ಸ್ವಾಗತಿಸುತ್ತೇವೆ, ಅದರಲ್ಲಿ ಏನು ಇದ್ದರೂ ಅದು 'ಅವಾರ್ಡ್' ಎಂದು ಪರಿಗಣಿಸುತ್ತೇವೆ ಎಂದು ಹೇಳಿದರು. ನಾನು ಅವರಿಗೆ ಹೇಳುತ್ತೇನೆ. ಇದು ಮುತ್ಸದ್ದಿತನ ಅಲ್ಲ, ಇದು ಜವಾಬ್ದಾರಿ ಸರ್ಕಾರದ ವರ್ತನೆ ಅಲ್ಲ, ರಾಜಕೀಯ ನೀತಿ ಅಲ್ಲ ಎಂದು. ಅವರು ಪ್ರಜಾಪ್ರಭುತ್ವದಲ್ಲಿ ದೊಡ್ಡವರು ಇರಬಹುದು. ಅವರಿಗೆ ಅಖಿಲಭಾರತ ಮಟ್ಟದ ವ್ಯಕ್ತಿತ್ವ ಇರಬಹುದು. ಆದರೆ ಈ ರಾಜ್ಯದ 2½ ಕೋಟಿ ಜನರ ಒಂದು ಸಮಸ್ಯೆಯನ್ನು ಬಗೆಹರಿಸುವ, ಅವರ ಹಿತ ಅವರ ಭವಿಷ್ಯವನ್ನು ರೂಪಿಸತಕ್ಕಂಥ ಮತ್ತು ಕಾಪಾಡತಕ್ಕಂಥ ಹೊಣೆಯನ್ನು ಹೊತ್ತ ಮುಖ್ಯಮಂತ್ರಿಗಳು ಆಗಿರತಕ್ಕಂಥವರು ಈ ರೀತಿ ನಮ್ಮ ರಾಜ್ಯದ ಜನತೆಯನ್ನು ಔದಾರ್ಯದ ಉರುಳಿನಲ್ಲಿ ಹಾಕಬಾರದಾಗಿತ್ತು ಎಂದು ಹೇಳುತ್ತೇನೆ. ಇದನ್ನು ಕ್ಯಾಬಿನೆಟ್‌ನಲ್ಲಿ ಮೊದಲು ತೀರ್ಮಾನ ಮಾಡಲಿ. ಅದು ಎಂತಹ ಕ್ಯಾಬಿನೆಟ್ ಅಂದರೆ ನಿಜಲಿಂಗಪ್ಪನವರು ಹೇಳಿದ ಹಾಗೆ ಕೇಳುವಂಥ ಕ್ಯಾಬಿನೆಟ್. ಮಹಾಜನರು ದೊಡ್ಡವರು, ವರದಿ ದೊಡ್ಡದು ಒಪ್ಪಿಕೊಳ್ಳುತ್ತೇವೆ ಎಂದು ಮೊದಲೇ ಹೇಳಿಬಿಟ್ಟರೆ ಹೇಗೆ ? You might have placed it before the Cabinet. ಅನಂತರ ವಿರೋಧ ಪಕ್ಷದ ಮುಖಂಡರುಗಳಿಗೆ ತಂತಿಗಳನ್ನು ಕಳುಹಿಸಿ, ನಾವು ಬರಲೂ ಬಾರದು, ಹೇಳಲೂ ಬಾರದು ಎನ್ನುವ ರೀತಿಯಿಂದ ವರ್ತನೆ ಮಾಡಿರುವುದು ಖಂಡನೀಯ. ನಿಮ್ಮ ವರ್ತನೆಗಳು, ನಿಮ್ಮ ಸಂಧಾನಗಳನ್ನು ಖಂಡಿಸಬೇಕಾಗಿದೆ. ಮಹಾರಾಷ್ಟ್ರದಲ್ಲಿ ಎಷ್ಟು ಒಗ್ಗಟ್ಟು ಇದೆ ನೋಡಿ. ವಿರೋಧ ಪಕ್ಷದವರೂ, ಆಡಳಿತ ಪಕ್ಷದವರೂ ಒಂದೇ ಆಗಿದ್ದಾರೆ. ಇಲ್ಲಿ ಸರ್ಕಾರದವರೇ ಎಲ್ಲಾ ಪಕ್ಷದವರ ಅಭಿಪ್ರಾಯವನ್ನೂ ಪ್ರತಿಬಿಂಬಿಸುವ ಭಾವನೆಯಿಂದ ಮುಂದುವರೆಯುತ್ತಿದ್ದಾರೆ. ಆದರೆ ನಮ್ಮನ್ನು ಯಾವತ್ತೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಎಲ್ಲಾ ಆದ ಮೇಲೆ ಹೀಗೆ ಆಗಿದೆ ಏನು ಮಾಡುವುದು ಎಂದು ಹೇಳುತ್ತೀರಿ. ಇದು ತಪ್ಪು. ಮುಂದೆಯಾದರೂ ಒಂದು ಒಳ್ಳೆಯ ಪರಂಪರೆಯನ್ನು ನಾವು ಹಾಕಿಕೊಳ್ಳುವುದು ಒಳ್ಳೆಯದು. ಅದನ್ನು ನಾನು ವಿಷಾ

ದದಿಂದ ಹೇಳುತ್ತೇನೆ. ಮಾನ್ಯ ಶಿವಪ್ಪನವರು ಸೌಜನ್ಯದಿಂದ ಹೋದರು, ಸಭೆಯನ್ನು ಕರೆಯಿರಿ ಎಂದರು. ಇವತ್ತು ಅಭಿಮತ ಸಂಗ್ರಹ ಮಾಡಿದರೆ ಸಾಕು, ಶ್ರೀಮಾನ್ ನಾಯಕರಂತೆ ತೀರ್ಮಾನ ತೀರ್ಮಾನ ಮಾಡುವುದು ಬೇಡ ಎಂದು ಬಂದಿದ್ದಾರೆ, ಸಂತೋಷ. ಅವರವರ ಅಭಿಪ್ರಾಯ ಅವರದು. ನಾನು ನನ್ನ ಅಭಿಪ್ರಾಯವನ್ನು ಈ ಸಭೆಯಲ್ಲಿ ಕೊಡಬೇಕೆಂದು ಇಷ್ಟಪಡುತ್ತೇನೆ, ಸ್ವಾಮಿ.

5-00 P.M.

ಮಹಾರಾಷ್ಟ್ರದವರು ಲಾಗ ಹೊಡೆದರು ಎಂದು ನಮ್ಮ ರಾಜ್ಯದವರು ಒಂದು ಪುಸ್ತಕದಲ್ಲಿ ಹೇಳಿದ್ದಾರೆ. ನಾನು ಹೇಳುವುದು ಈಗ ಎರಡು ಮೂರು ಲಾಗ ಹೊಡೆದು ಕುಪ್ಪಳಿಸಿದರಲ್ಲ, ಜತ್ತಿ ಅವರು ಸಣ್ಣಪುಟ್ಟ ಹೊಂದಾಣಿಕೆ ಎಂದು ಹೀಗೆ ನೆಗೆದದ್ದು, ಶ್ರೀ ನಿಜಲಿಂಗಪ್ಪನವರು ಡೆಲ್ಲಿಯಿಂದ ನೆಗೆನೆಗೆಯುತ್ತ ಬಂದದ್ದು, ಕೊನೆಗೆ ಇಲ್ಲಿಗೆ ಬಂದು ಆ ಪುಸ್ತಕದಲ್ಲಿ ಕೊನೆಯಲ್ಲಿ ಹೇಳುತ್ತಾರೆ, ರಾಜ್ಯದ ಪರವಾಗಿ ಕಮಿಟ್‌ಮೆಂಟ್ ಅಂತ.

"Under the circumstances........."

Which is that circumstance, ಅದು ಅವರಿಗೇ ಗೊತ್ತು.

"it is for the Central Government to take a firm stand and cry halt to all agitational activities by deciding that the recommendations will be accepted as an award and by implementing the same whether the parties are pleased or displeased. Unless a firm stand is taken, agitational activities will go on increasing leading all sorts of disturbances .The chapter of this dispute must be closed once and for all. As exhorted by the Chief Minister of Mysore, it is high time that the nation rises above all such parochial and fissiparous tendencies and devotes its attention to national reconstruction."

ಎಂಥ ದೊಡ್ಡ ಮಾತು! ಬಹಳ ದೊಡ್ಡ ಮಾತು! ಆದರೆ ಸಂದರ್ಭೋಚಿತವಾಗಿ ದೊಡ್ಡ ಮಾತು ಆಡಿ, ದೊಡ್ಡ ಕೆಲಸ ಮಾಡಿದರೆ ಅದಕ್ಕೆ ಗೌರವವಿರುತ್ತದೆ, ಅದಕ್ಕೆ ಒಂದು ಸಮರ್ಥನೆ ಇರುತ್ತದೆ. ಯಾವುದಕ್ಕೆ ಯಾವುದನ್ನೂ ಹೇಳಬೇಕೋ, ಯಾವಾಗ ಹೇಳಬೇಕೋ ಅವಾಗ ಬಿಟ್ಟು ಬೇರೆ ಕಡೆ ಹೇಳಿದರೆ ಅದು ಹೇಡಿತನವಾಗುತ್ತದೆ, ಮುಖ ಉಳಿಸಿಕೊಳ್ಳತಕ್ಕ ಜಾಣ್ಮೆಯೂ ಆಗುತ್ತದೆ, ಅರ್ಥವಿಲ್ಲದ ಅಲಾಪನೆಯೂ ಆಗುತ್ತದೆ.

ನಾನು ರಾಜ್ಯ ಸರ್ಕಾರವನ್ನು, ಯಾವ ಯಾವ ಭಾಗಗಳು ನಮಗೆ ಬರಬೇಕು, ಯಾವ ಯಾವ ಹಳ್ಳಿಗಳು ಬರಬೇಕು ಎಂದು ನಮ್ಮಲ್ಲಿ ಒಂದು ಲಿಸ್ಟ್ ಹಾಕಿಲ್ಲವೇ ಎಂದು ಕೇಳಿದೆ. ಅದು ಆಗಿಲ್ಲ ಎಂದು ಕೂಡ ಕೇಳಿದ್ದೇನೆ. ಪಾರ್ಲಿಮೆಂಟಿನಲ್ಲಿ ಈಗಾಗಲೇ ಕರ್ಣಾಟಕದಿಂದ ಹೋಗಿರತಕ್ಕ ಲೋಕಸಭೆಯ ಸದಸ್ಯರು ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಮಹಾರಾಷ್ಟ್ರ ಸ್ನೇಹಿತರೇ ಏನು ಹೇಳುತ್ತಾರೆಂದರೆ, ಮೊದಲು ಜೂಟಲೆಂಟ್ ಆಗಿದ್ದರು ಒಂದು ರೂಮರ್ ಬಂತು ಎಂದು ಖುಷಿಪಟ್ಟರು. ಆದರೆ ಆ ಭಾಗಗಳು ವರದಿಯ ಪ್ರಕಾರ ನಮಗೆ ಬರಬೇಕು ಎಂದು ಗೊತ್ತಾದ ಕೂಡಲೇ ನಮ್ಮವರು ಖುಷಿ ಪಟ್ಟರು, ಅವರಿಗೆ ಕನವಿಸಿಯಾಯಿತು ಮತ್ತು ಈ ವರದಿಯಿಂದ ನಮಗೆ ಏನೂ ಬಂದಿಲ್ಲ ಎನ್ನುವ ತೀರ್ಮಾನಕ್ಕೆ ಮಹಾರಾಷ್ಟ್ರ ಸ್ನೇಹಿತರು ಬಂದರು. ಇದರಲ್ಲಿ ಕರ್ಣಾಟಕದವರಿಗೆ ಬಹಳ ಸಿಕ್ಕಿಬಿಟ್ಟಿತು, ಮಹಾಜನ್ ಆಯೋಗದ ವರದಿಯಿಂದ ಬಹಳ ಸಿಕ್ಕಿಬಿಟ್ಟಿತು, ಆದುದರಿಂದ ಬಹಳ ಖುಷಿಯಾಗಿ ಇದನ್ನು ಈಗಲೇ, ಹೀಗೆಯೇ ಕಾರ್ಯಗತ ಮಾಡಿ ಎಂದು ಪತ್ತಾಯ ಪಡಿಸುತ್ತಿದ್ದಾರೆ ಎನ್ನುವ ಒಂದು ಅಭಿಪ್ರಾಯವನ್ನು ಹುಟ್ಟಿಸುತ್ತಿದೆ. ಅದು ಖಂಡಿತ ಸುಳ್ಳು ಮಾತು. ಎಸ್.ಆರ್. ಆಕ್ಟ್ ಪ್ರಕಾರ ಇದ್ದಂಥ ಪ್ರದೇಶಗಳಲ್ಲಿ ನಿಪ್ಪಾಣಿ ಕೈಬಿಟ್ಟು ಹೋಗುತ್ತದೆ, ಬೆಳಗಾಂನ ಕೆಲವು ಹಳ್ಳಿಗಳು ಹೋಗುತ್ತವೆ, ಖಾನಾಪುರ ತಾಲ್ಲೂಕು ಬಹುಮಟ್ಟಿಗೆ, ಖಾನಾಪುರ ಮತ್ತು ನಂದಗಡ ಎರಡೂ ನಗರಗಳೂ ಸೇರಿ ಆ ತಾಲ್ಲೂಕು ಹೋಗುತ್ತದೆ. ಇನ್ನು ಜತ್‌ನ ಕೆಲವು ಭಾಗಗಳು ಹೋಗುತ್ತವೆ, ಮಂಗಳವೇಡೆ ನಮಗೆ ಬರುವುದಿಲ್ಲ, ದಕ್ಷಿಣ ಶೋಲಾಪುರ ಈ ಭಾಗಗಳು ಹೋಗುತ್ತವೆ. ನಾವು ಏನು ಖುಷಿ ಮಾಡಿದೆವು ಎಂದು ಗೊತ್ತಾಗುವುದಿಲ್ಲ. ವರದಿಯನ್ನು 'ಇನ್ ಟೋಟೋ' ಒಪ್ಪಿಕೊಳ್ಳಿ ಎಂದು ಬಹಳ ಜನ ಹೇಳಿದರು. 'ಇನ್ ಟೋಟೋ'

(ಶ್ರೀ ಎಸ್. ಗೋಪಾಲಗೌಡ)

ಒಪ್ಪಿಕೊಳ್ಳುವುದಕ್ಕೆ ನಮಗೆ ಹೊಸದಾಗಿ ಏನು ಬಂದಿದೆ? 'ಇನ್ ಟೋಟೋ' ಒಪ್ಪಿಕೊಳ್ಳುವ
ಪ್ರಶ್ನೆ ಇಲ್ಲ. ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳೋಣ. ಇದರಲ್ಲಿ ತಪ್ಪು ಅಭಿ
ಪ್ರಾಯಕ್ಕೆ ಅವಕಾಶವಿಲ್ಲ. ನಿಪ್ಪಾಣಿಯನ್ನು ಉಳಿಸಿಕೊಳ್ಳುವುದು, ನಿಪ್ಪಾಣಿ ಕರ್ಣಾಟಕದಲ್ಲಿರು
ವುದು, ನಿಪ್ಪಾಣಿಯ ವ್ಯಾಪಾರದೊಳಗಿನ ದೃಷ್ಟಿಯಿಂದ, ನಮ್ಮ ಸ್ನೇಹಿತರಾದ ಶ್ರೀಮಾನ್ ಮಾನ್ವಿ
ಅವರ ದೃಷ್ಟಿಯಿಂದಲೂ ಬಹಳ ಒಳ್ಳೆಯದು. ನಿಪ್ಪಾಣಿಯು ಚಿಕ್ಕೋಡಿ ತಾಲ್ಲೂಕಿನಲ್ಲಿದ್ದರೆ
ಶ್ರೀ ಮಾನ್ವಿಯವರಿಗೂ ಹೆಚ್ಚು ಅನುಕೂಲವಾದೀತು. ಅಲ್ಲಿ ಎರಡು ಭಾಷೆಯ ಜನರೂ ಇರುತ್ತಾರೆ.
ನಿಪ್ಪಾಣಿ ತಂಬಾಕು ಬಹಳ ಉತ್ತಮವಾದುದು. ಅದರಿಂದ ಮೂರೂವರೆ ಕೋಟಿ ರೂಪಾಯಿ
ಬರುತ್ತದೆ. ನಿಪ್ಪಾಣಿಯು ಚಿಕ್ಕೋಡಿ ತಾಲ್ಲೂಕಿನ ಬಂಗಾರದ ಕುರಿ ಇದ್ದ ಹಾಗೆ. ಆ ಭಾಗವನ್ನು
ಮಹಾಜನ್ ಅವರು—ಅವರ ಮೇಲೆ ನಾನು ಏನೂ ಹೇಳುತ್ತಿಲ್ಲ—ಆ ಭಾಗದ 40 ಹಳ್ಳಿಗಳನ್ನೂ,
ಹಾಗೂ ನಿಪ್ಪಾಣಿಯನ್ನೂ ಮಹಾರಾಷ್ಟ್ರಕ್ಕೆ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ನಾನು ಹೇಳು
ವುದು ಒಂದು ತತ್ವದ ಮೇಲೆ ಆಕ್ಟ್ ಮಾಡಬೇಕು, ನಿಪ್ಪಾಣಿ ಮತ್ತು 40 ಹಳ್ಳಿಗಳನ್ನು ಕರ್ಣಾಟಕ
ದಲ್ಲಿ ಉಳಿಸಬೇಕು. ಚಂದಗಡ ತಾಲ್ಲೂಕನ್ನು ಎಸ್. ಆರ್. ಕಮಿಷನ್ ಅವರು ಕೊಟ್ಟರು. ಅದು
ಆ ಭಾಗದಲ್ಲಿದೆ ಎಂದು ನಾವು ಒಪ್ಪಿಕೊಂಡಿದ್ದೇವೆ. ಖಾನಾಪುರ ತಾಲ್ಲೂಕನ್ನು ಮಹಾರಾಷ್ಟ್ರಕ್ಕೆ
ಕೊಟ್ಟಿದ್ದಾರೆ. ಇದಕ್ಕೆ ಯಾವ ಕಾರಣವೂ ಕಂಡುಬರುವುದಿಲ್ಲ. ಅಲ್ಲಿರತಕ್ಕ ಅರಣ್ಯ ಸಂಪತ್ತಿನಿಂದ
ಮತ್ತು ಅಲ್ಲಿ ನಾವು ಈಗಾಗಲೇ ಆರಂಭ ಮಾಡಿರತಕ್ಕ ಕೆಲಸಕಾರ್ಯಗಳಿಂದ ಅದು ಕರ್ಣಾಟಕ
ದಲ್ಲಿಯೇ ಇರಬೇಕು. ಅಲ್ಲಿ ನಾವು ಈಗಾಗಲೇ ಅನೇಕ ನೀರಾವರಿ ಕೆಲಸ ಕಾರ್ಯಗಳನ್ನು ಮಾಡಿ
ದ್ದೇವೆ. ಖಾನಾಪುರದವರು ಹೆಚ್ಚು ಕಡಮೆ ರಾಜ್ಯದ ಜನತೆ ಆಗುವುದಕ್ಕೆ ಒಪ್ಪಿಕೊಂಡಿದ್ದರು.
ಅವರನ್ನು ಮಹಾಜನ್ ಅವರು ಅಲ್ಲಿಗೆ ಕಳಿಸಿದ್ದಾರೆ. ಹಾಗೆಯೇ ನಿಪ್ಪಾಣಿ ಪ್ರಶ್ನೆ ಕೂಡ. ಚಂದ
ಗಡ ತಾಲ್ಲೂಕನ್ನು ಬಿಟ್ಟು ಬೆಳಗಾಂ ಜಿಲ್ಲೆಯ ಜನಸಂಖ್ಯೆ 1951 ಸೆನ್ಸಸ್ ಪ್ರಕಾರವಾಗಿ
17,26,908. ಚಂದಗಡ ತಾಲ್ಲೂಕಿನ ಜನಸಂಖ್ಯೆ 80,000. ಅದನ್ನು ಕಳೆದು 16 ಲಕ್ಷ ಜನ
ಇರತಕ್ಕ ಒಂದು ಜಿಲ್ಲೆ. ಇದರಲ್ಲಿ ಕನ್ನಡ ಮಾತನಾಡುವವರು ಸೇಕಡ 67 ರಷ್ಟಿದ್ದಾರೆ, ಅಂದರೆ 11
ಲಕ್ಷ ಜನರಿದ್ದಾರೆ. 3.85 ಲಕ್ಷ ಜನರು ಮರಾಠಿ ಮಾತನಾಡುವವರು, ಉಳಿದವರು ಇತರರು
ಇದ್ದಾರೆ. ಖಾನಾಪುರ ತಾಲ್ಲೂಕನ್ನು ನಾನು ನೋಡಿದ್ದೇನೆ. ಅದು ದಿನ ಬೆಳಗಾದರೆ ಬೆಳಗಾಂ
ಮತ್ತು ಬೈಲಹೊಂಗಲ ಈ ಎರಡೂ ತಾಲ್ಲೂಕುಗಳ ಜೊತೆ ಸಂಪರ್ಕವನ್ನು ಹೊಂದಿದೆ. ಅಲ್ಲಿನ
ಜನರು ಮರಾಠಿ ಮಾತನಾಡುತ್ತಾರೆ, ಕನ್ನಡವನ್ನೂ ಮಾತನಾಡುತ್ತಾರೆ. ಇದನ್ನು ಮಹಾರಾಷ್ಟ್ರಕ್ಕೆ
ಕೊಟ್ಟಿರುವುದರ ಬಗ್ಗೆ ನನ್ನ ವಿರೋಧವಿದೆ. ಇದರ ತಿದ್ದುಪಡಿಯಾಗಬೇಕು ಪಾರ್ಲಿಮೆಂಟಿನಲ್ಲಿ.
ನಿಪ್ಪಾಣಿ ಮತ್ತು 40 ಹಳ್ಳಿಗಳೂ ಸಹ ಮೈಸೂರಿನಲ್ಲಿಯೇ ಉಳಿಯಬೇಕು. ಆದ್ದ
ರಿಂದ ಕೆಲವು ತಿದ್ದುಪಡಿಗಳಾಗಬೇಕೆಂದು ನಾನು ಹೇಳುತ್ತೇನೆ. ಶ್ರೀಮತಿ ಇಂದಿರಾ
ಗಾಂಧೀಜಿಯವರನ್ನು, ಶಿವಮೂರ್ತಿಶಾಸ್ತ್ರಿಗಳು, ನಮ್ಮ ಗೆಳೆಯರಾದ ಪಾಟೀಲರು
ಮತ್ತು ನಾನು ಹೋಗಿ ಕಮಿಷನ್ ನೇಮಕವಾಗುವುದಕ್ಕೆ ಮುಂಚೆ ನೋಡಿದ್ದೆವು.
ಮಹಾಜನ್ ಕಮಿಷನ್ ನೇಮಕಮಾಡಿದಾಗ Belgaum is a live issue ಎಂದು ಪದೇ ಪದೇ
ಅವರು ಹೇಳಿದರು. ಮಡಕಸಿರಾ, ತಾಳವಾಡಿ ಫಿರ್ಕ ಮುಂತಾದುವುಗಳ ವಿಚಾರದಲ್ಲೂ ಆಂಧ್ರ
ಮತ್ತು ಮದ್ರಾಸಿನವರಿಗೂ ನಮಗೂ ಭಿನ್ನಾಭಿಪ್ರಾಯವಿದೆ. ನಮಗೆ ಸೇರಬೇಕಾದ ಎಲ್ಲಾ ಭಾಗ
ಗಳೂ ಸೇರಿಲ್ಲ. ಕೇವಲ ಮಹಾರಾಷ್ಟ್ರದ ಒತ್ತಡಕ್ಕಾಗಿ ಕಮಿಷನ್ ರಚಿಸಿ Belgaum is a live
issue, ಎಂದು ಹೇಳುತ್ತಾರೆ. ಯಾರು ಅದನ್ನು ಲೈವ್ ಇಷ್ಯೂ ಆಗಿ ಇಟ್ಟರು ಎಂಬುದನ್ನು
ಹೇಳುವುದಿಲ್ಲ. ಕದಂರವರು ಕಾರವಾರನ್ನು ಪ್ರತಿನಿಧಿಸುವ ಸದಸ್ಯರು. ಕಾರವಾರ, ಹಳಿಯಾಳ
ತಾಲ್ಲೂಕು ಮತ್ತು ಸೂಪಪೇಟ್ ಮಹಾರಾಷ್ಟ್ರಕ್ಕೆ ಸೇರಿಸಿದ್ದಾರೆ. ಕಾರವಾರ ಕೆಳಮಟ್ಟದ
ಬಂದರು, ಅಭಿವೃದ್ಧಿಯಾದರೆ ಒಳ್ಳೆಯ ಬಂದರು, ಅದನ್ನು ನೋಡಿದ್ದೇನೆ. ಕಾರವಾರ ನೂರು
ವರ್ಷಗಳ ಹಿಂದೆ ಬ್ರಿಟಿಷರಕಾಲಕ್ಕೆ ಹಿಂದೆ ಉತ್ತರ ಕನಡಾದ ಬಂದರು, ಅದನ್ನು ಅಭಿವೃದ್ಧಿ
ಮಾಡಬಹುದು. ಹಳಿಯಾಳ ಮತ್ತು ಸೂಪಪೇಟ್ ಗಳಲ್ಲಿ ಮರಾಠಿ ಮತ್ತು ಕೊಂಕಣಿ ಮಾತನಾಡುವ
ವರಿದ್ದಾರೆ, ಅದಕ್ಕೂ ಮಹಾರಾಷ್ಟ್ರಕ್ಕೂ ಸಂಬಂಧವಿಲ್ಲ ಕಾಂಟಿಗ್ಯೂಟಿ ಇಲ್ಲ ಅದು ಒಳ್ಳೆಯ ಫಾರೆಸ್ಟ್
ಏರಿಯಾ, ಅಲ್ಲಿ ಅತ್ಯುತ್ತಮವಾದ ನಾಟ ಉಂಟು. ಕಾಳಿ ಯೋಜನೆ ಅಲ್ಲಿ ಬರುತ್ತದೆ. ಮಹಾಜನ್
ರವರು ಕೊಂಕಣಿಯು ಮರಾಠಿಯ ಉಪಭಾಷೆಯಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ, ಅದು
ಮರಾಠಿಯ ಡಯಲೆಕ್ಟ್ ಅಲ್ಲ ಎಂದು ಅನೇಕ ತಜ್ಞರು, ಪಂಡಿತರು ಮುಂತಾದ ತಿಳಿದವರನ್ನೆಲ್ಲಾ
ಸೇರಿಸಿ ತೀರ್ಮಾನಮಾಡಿದ್ದಾರೆ. ಆ ಕಾರಣದಿಂದ ನಾವು ಕಾರವಾರ, ಸೂಪ ಅಥವಾ ಹಳಿಯಾಳ
ಈ ಯಾವುದನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವುದಕ್ಕಾಗುವುದಿಲ್ಲ. ಕದಂರವರು ಮಾತನಾಡುವವರಿ

ದ್ದಾರೆ ಬಹುಶಃ ಅವರೂ ಇದಕ್ಕೆ ಒಪ್ಪುತ್ತಾರೆ. ಕಾರವಾರ ಯಾವತ್ತೂ ಮಹಾರಾಷ್ಟ್ರದ ಭಾಗ. ವಾಗುವುದಕ್ಕೆ ಸಾಧ್ಯವಿಲ್ಲ. ಆಗಬಾರದು; ಮತ್ತು ಕಾರವಾರ ಜಿಲ್ಲೆಯ ಭವಿಷ್ಯ ಕರ್ಣಾಟಕದಲ್ಲಿ ಉಜ್ವಲವಾಗಿದೆ ಎಂಬ ಅಭಿಪ್ರಾಯವಿದೆ. ಇನ್ನು ಜನಸಂಖ್ಯೆನೋಡಿದರೆ 8—9 ಲಕ್ಷವಾಗುತ್ತದೆ ಕಾರವಾರದಿಂದ ಬಿದರೆವರೆಗೆ ಸುಮಾರು 200 ಮೈಲಿ ಹೋಗಿ ತೀರ್ಮಾನಮಾಡಿದ್ದಾರೆ. Migration of population ವಿಚಾರ ಹೇಳಿದ್ದಾರೆ. ಕೋದಂಡರಾಯರು ಅದನ್ನೂ ಗಮನಕ್ಕೆ ತೆಗೆದು ಕೊಳ್ಳಬಹುದೆಂದು ಹೇಳಿದ್ದಾರೆ. ಕೊಂಕಣಿ ಮರಾಠಿ ಭಾಷೆಯ ಉಪಭಾಷೆ ಎಂದು ವಾದ ಮಾಡಿದ್ದನ್ನು ಮಹಾಜನ್‌ರವರು ತಿರಸ್ಕರಿಸಿದ್ದಾರೆ, ಒಂದು ಕಡೆ ಇರುವವರು ಇನ್ನೊಂದು ಕಡೆಗೆ ಹೋಗಬಹುದು. ಮಹಾಜನರ ವಾದವನ್ನು ನಾನು ಸಮರ್ಥನೆಮಾಡುತ್ತೇನೆ. ಮಹಾರಾಷ್ಟ್ರದವರ ವಾದದಲ್ಲಿ ಹುರುಳಿಲ್ಲ. ಈ ದಿವಸ ಇಂಡಿಯಾದೇಶದ ಯಾವುದೇ ಪಟ್ಟಣವನ್ನು ತೆಗೆದುಕೊಂಡರೂ ಮುಂಬಯಿ, ಅಹಮದಾಬಾದು, ದೆಹಲಿ, ಲಕ್ನೋ ಅಲಹಾಬಾದ್, ಕಲ್ಕತ್ತ, ಮದ್ರಾಸು ಬೆಂಗಳೂರು ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಒಂದೇ ಭಾಷೆ ಮಾತನಾಡುವವರು ಇದ್ದಾರೆಯೇ? 1951ನೆಯ ಇಸವಿಯ ಸೆನ್ಸಸ್ ಪ್ರಕಾರ ಬೆಂಗಳೂರಿನಲ್ಲಿ 61 ಭಾಷೆ ಮಾತನಾಡುವ ಜನರಿದ್ದಾರೆ. ಇದೊಂದು ಅಂಶ. ಸಮಾನ್ಯವಾಗಿ ಈ ದಿವಸ ಎಲ್ಲಾ ಹಳ್ಳಿಗಳಲ್ಲೂ, ಪಟ್ಟಣಗಳಲ್ಲೂ ಬೇರೆ ಬೇರೆ ಭಾಷೆಗಳವರು, ಜಾತಿಯವರು ಇದ್ದಾರೆ; ಎಲ್ಲಾ ಸೇರ್ಪಡೆಯಾಗಿದೆ, ವಿಲೀನವಾಗಿದೆ. ನಾವು ಪದೇ ಪದೇ ಭಾರತದ ಐಕ್ಯತೆಯ ವಿಚಾರದಲ್ಲಿ ಮಾತನಾಡುತ್ತೇವೆ. ಈಚೀಚೆಗೆ ಜನರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸುವುದು ಅತಿಯಾಗಿದೆ. ಇಂದು ಪಾಕೀಸ್ಥಾನ ಮತ್ತು ಭಾರತ ಬೇರೆಬೇರೆಯಾದ ಮೇಲೆ ನಾವು ಅನೇಕ ಕಷ್ಟಗಳನ್ನನುಭವಿಸುತ್ತಿದ್ದೇವೆ. ಈ ಎರಡುಸಾರ್ವಭೌಮ ರಾಷ್ಟ್ರಗಳಿಗೆ ಘರ್ಷಣೆಯಾಗುತ್ತಿದೆ. ಆದರೆ ಅದರ ಪ್ರಶ್ನೆಯೇ ಬೇರೆ. ನಾವು ಒಂದು ದೇಶದ ಜನ, ಎಲ್ಲರೂ ಭಾರತದಲ್ಲಿದ್ದೇವೆ. ಹೀಗಿರುವಾಗ ಹೊರಗಿನವರ ಘರ್ಷಣೆಯೇ ಜಾಸ್ತಿಯಿರುವಾಗ ನಾವು ನಾವು ಕಿತ್ತಾಡಿದರೆ ಭಾರತದ ಐಕ್ಯಕ್ಕೆ ಧಕ್ಕೆ ಬರುತ್ತದೆ.

ಇನ್ನೊಂದು ಪೋಲ್ ರಿಸಲ್ಟಿನ ವಿಚಾರ. ಚುನಾವಣೆಯಲ್ಲಿ ತಾವು ಗೆದ್ದು ಬಂದಿರುವುದರಿಂದ ಕೆಲವು ಭಾಗಗಳು ಗೆದ್ದಿರುವ ಕ್ಷೇತ್ರದಲ್ಲಿರುವುದು ಮಹಾರಾಷ್ಟ್ರಕ್ಕೆ ಹೋಗಬೇಕು ಎಂಬದು ಕದಂರವರ ಅಭಿಪ್ರಾಯ. ಆದರೆ ಚುನಾವಣೆಗಳು ಕೇವಲ ಭಾಷೆಯ ಆಧಾರದಮೇಲೆ ನಡೆಯುವುದಿಲ್ಲ, ಅದಕ್ಕೆ ಬೇರೆ ಬೇರೆ ಕಾರಣಗಳಿರುತ್ತವೆ. ಇದನ್ನು ಗಣನೆಗೆ ತೆಗೆದುಕೊಳ್ಳಬಾರದು ಎಂದು ಮಹಾಜನ್‌ರವರೂ ಕೂಡ ಹೇಳಿದ್ದಾರೆ, ಸ್ಪಷ್ಟಪಡಿಸಿದ್ದಾರೆ, ಇದನ್ನು ನಾನು ಸಮರ್ಥನೆ ಮಾಡುತ್ತೇನೆ. ಗೋವಾದಲ್ಲೇನಾಯಿತು ಎಂಬುದನ್ನು ನೋಡಬಹುದು, ಅಲ್ಲಿ ರೆಫರೆಂಡಂ ತೆಗೆದು ಕೊಳ್ಳಬೇಕೆಂದು ಹೇಳಿದರು. ಇದು ಬಹಳ ಕ್ಲಿಷ್ಟವಾದ ವಿಷಯ, ಒಪೀನಿಯನ್ ಪೋಲ್ ಗೋವಾದಲ್ಲಿ ತೆಗೆದು ಕೊಂಡಾಗ ಏನಾಯಿತೆಂಬುದು ಗೊತ್ತಿದೆ. ಈ ಸಮಸ್ಯೆಯನ್ನು ಜನರಿಗೇ ಬಿಟ್ಟರೆ, ಅವರ ಅಭಿಪ್ರಾಯ ಕೊಡಿ ಎಂದರೆ ಕೆಲವರು ತಾವು ಕನ್ನಡಿಗರಲ್ಲ, ಮರಾಠೆಯವರು ಎಂದೂ ಮತ್ತೆ ಕೆಲವರು ನಾವು ಮರಾಠಿಯವರಲ್ಲ ಕನ್ನಡಿಗರು ಎಂದೂ ಕೆಲವರು ಹೇಳುವ ಪ್ರಸಂಗ ಬರುತ್ತದೆ. ಈ ಗಡಿ ವಿವಾದ ಪ್ರಾರಂಭವಾಗಿ ಸುಮಾರು ಹತ್ತು ವರ್ಷವಾಯಿತು. ನಾವೆಲ್ಲರೂ ಭಾರತಿಯರು ಎಂಬುದನ್ನು ಮರೆಯಬಾರದು. ದಾಯಾದಿಗಳಹಾಗೆ ಕಾದಾಡಬಾರದು, ಇದಕ್ಕೆ ಮುಕ್ತಾಯ ಹಾಗಬೇಕು. ಆದುದರಿಂದ ಜನಾಭಿಪ್ರಾಯ ಸಂಗ್ರಹ ಮಾಡಬೇಕು, ಒಪೀನಿಯನ್ ಪೋಲ್ ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಈ ಸಂದರ್ಭದಲ್ಲಿ ಸೂಕ್ತವಾದುದಲ್ಲ. ನಿರ್ದಿಷ್ಟವಾದ ತತ್ವಗಳಿಗನುಗುಣವಾಗಿ ನಡೆಯುವುದು ಒಳ್ಳೆಯದು. ಈ ಮಾತನ್ನು ಕೂಡ ಮಹಾಜನ್‌ರವರು ಒಂದು ಕಡೆ ಪಸ್ತಾಪಮಾಡಿದ್ದಾರೆ. ಅವರ ವರದಿಯಂತೆ ನಮಗೆ ಬಂದಿರುವುದು ನಮ್ಮಿಂದ ಹೋಗಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ :

"The fo'lowiug areas have been recommended for transfer from Mysore to Maharashtra:—

The town of Nippani with 40 villages of Nipani in Chikkodi taluk of Belgaum District. The population recommended for transfer is 1,17,783, out of which 89,893 is Marati speaking, the percentage being 76.3.

Belgaum:—

9 villages of Hukkeri taluk in Belgaum district out of 18 villages claimed .....

(ಶ್ರೀ ಎಸ್. ಗೋಪಾಲಗೌಡ)

The result is that out of 260 villages offered by Bombay State to Mysore in 1957, 227 villages covering an area of 1368 sq. miles are recommended for transfer. The population of the area recommended for transfer is 3,49,000 Kannada speaking, percentage being 57-9."

ಈ ವಿವರಗಳು ಹಳ್ಳಿಗಳು ಎಷ್ಟು ಬಂದಿವೆ ಏನು ಎಂಬುದನ್ನು ನಾನು ಹೇಳುವುದಿಲ್ಲ. ಈಗ ಉಳಿದಿರುವುದು ಈ ವರದಿಯನ್ನು ಏನು ಮಾಡಬೇಕು ಎಂಬುದು. ನಾನು ಹೇಳುತ್ತೇನೆ ಈ ವರದಿ, ವರದಿಯೇ. ಯಾರಾದರೂ ಅವಾರ್ಡ್ ಅಂತ ವರ್ಣಿಸಿರಬಹುದು. This must be accepted in toto ಅಂತ ಹೇಳಿರಬಹುದು. ನಾನು ಹೇಳುತ್ತೇನೆ ಕರ್ನಾಟಕದಿಂದ ಹೋಗಿರುವ ಖಾನಾಪುರ, ನಿಪ್ಪಾಣಿ ಈ ಭಾಗಗಳು ಇಲ್ಲಿಯೇ ಉಳಿಯಬೇಕು. ಇನ್ನು ಮಹಾರಾಷ್ಟ್ರದವರಿಗೆ ಕೊಡುತ್ತೇವೆ ಅಂತ ಹೇಳಿರತಕ್ಕ ಹಳ್ಳಿಗಳು ನಮಗೆ ಬರಬೇಕು. ಜೊತೆಗೆ ನಮಗೆ ಇನ್ನೂ ಬರಬೇಕಾದಂತಹ ಬೇರೆ ಭಾಗಗಳು ಏನಿವೆ ಅವನ್ನು ಪಡೆದುಕೊಳ್ಳುವುದಕ್ಕೆ ಈ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಕೇಂದ್ರದವರು ಅದನ್ನು ಒಪ್ಪಬೇಕು. ಈ ಗಡಿ ತಂಟೆಯನ್ನು ಬಗೆಹರಿಸುವುದಕ್ಕೆ ಒಂದು ಪಕ್ಷ ಉಚ್ಚ ಆಯೋಗ ನೇಮಕ ಮಾಡಲೇ ಬೇಕಾಗಬಹುದು. ಇದನ್ನು ಮುಗಿಸೋಣ ಎಂದು ಕೆಲವರು ಹೇಳುತ್ತಾರೆ, ಅದು ಮುಗಿಸುವುದಿಲ್ಲ. ಈ ಒಂದು ಕಮೀಷನ್ ವರದಿಯನ್ನು ಒಪ್ಪಿದರೂ ಕೂಡ ಇದು ಮುಗಿಯುವುದಿಲ್ಲ ಇಲ್ಲ. ಕಾಸರಗೋಡಿನ ವಿಷಯದಲ್ಲಿ ಈಗಾಗಲೇ ನಂಬೂದ್ರಿಪಾದರವರ ಸರ್ಕಾರದವರು ಅವರ ಅಸ್ತಿತ್ವದಲ್ಲಿಲ್ಲದೇ ಇರುವಾಗ ಈ ಕಮಿಷನ್‌ನ್ನು ನೇಮಕ ಮಾಡಿದ ಒಂದು ಕಾರಣ ಮಾಡಿ ನಾವು ಈ ಒಂದು ಅವಾರ್ಡಗೆ ಬದ್ಧರಾಗುವುದಿಲ್ಲ ಎಂದು ಹೇಳಿ ಆಯಿತು. ಈಗಾಗಲೇ ಅಲ್ಲಿ ಎರಡು ಜನ ನಿರಪರಾಧಿಗಳ ಪ್ರಾಣ ಕೂಡ ಹೋಯಿತು. ಇನ್ನೂ ಏನೇನು ಈ ಗಡಿ ಭಾಗದಲ್ಲಿ ಆಗುತ್ತದೆಯೋ! ನಿಪ್ಪಾಣಿ ಅವರಿಗೆ ಬಂದಿದ್ದರೂ, ಅಲ್ಲಿನ ಜನರು ಬಹಳ ವ್ಯಥೆಯಿಂದ ಹೇಳಿ ಕೊಂಡು ಹೋಗಿದ್ದಾರೆ, ನಮ್ಮನ್ನೆಲ್ಲಾ ಕೈ ಬಿಡಬೇಡಿ ಎಂದು, ಅವರಿಗೆ ಏನು ಆಶ್ವಾಸನ ಈ ಸಭೆ ಮತ್ತು ಈ ಸರ್ಕಾರ ಕೊಡುತ್ತದೆಯೋ ಗೊತ್ತಿಲ್ಲ. ನನಗೆ ಯಾರಾದರೂ ಹೇಳಬಹುದು 'ಅವರಿಗೇನೋ ಟೆರಿಟೋರಿಯಲ್ ಆಂಬಿಷನ್ ಇದೆ' ಅಂತ, ನನಗೆ ಅದೇನೂ ಇಲ್ಲ. ಹಿಂದೇನೋ 200-300 ಜನಗಳನ್ನು ಕಟ್ಟಿಕೊಂಡು ವೆಲ್ಲೂರು, ಮಧುರೆ ತನಕ ಹೋದರೂ, ಅವರವರ ಭುಜ ಬಲ, ಪರಾಕ್ರಮ, ಕತ್ತಿಕಠಾರಿ ಬಲದ ಮೇಲೆ ಹೋಗುತ್ತಾ ಇದ್ದರು. ಈಗ ಭಾರತದಲ್ಲಿ ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ, ನಮ್ಮ ರಾಜ್ಯವನ್ನು ದೊಡ್ಡ ರಾಷ್ಟ್ರವನ್ನಾಗಿ ವಿಸ್ತರಿಸಬೇಕೆಂಬ ಆಕಾಂಕ್ಷೆ ನಮಗೆ ಇಲ್ಲ. ವಿದ್ಯಾಭ್ಯಾಸಕ್ಕೆ ಅನುಕೂಲವಾಗಬೇಕು, ಪ್ರಜಾಪ್ರಭುತ್ವದಲ್ಲಿ ಮೈಸೂರು ರಾಜ್ಯ ಸರ್ಕಾರ ಕನ್ನಡದಲ್ಲಿ ಹೊರಡಿಸಿರತಕ್ಕ ಹೊರಡಿಸತಕ್ಕ ಪ್ರಕಟಣೆಗಳು ಜನಕ್ಕೆ ಅರ್ಥವಾಗ ಬೇಕು, ಅವರು ಯಾವ ಪಟ್ಟಣದ ಕಡೆ ಅಭಿಮುಖವಾಗಿರುತ್ತಾರೆಯೋ ಆ ಕಡೆಗೆ ಬರುವುದಕ್ಕೆ ಅನುಕೂಲವಾಗಿರಬೇಕು, ಸಂಪರ್ಕ ವ್ಯವಸ್ಥೆ ಇರಬೇಕು, ವ್ಯಾಪಾರಕ್ಕೆ ಮತ್ತು ಸಾಧ್ಯವಾದ ಮಟ್ಟಿಗೂ ತಮ್ಮ ರಾಜ್ಯದ ಕೇಂದ್ರಕ್ಕೆ ಬಂದು ವ್ಯವಹಾರ ಮಾಡುವುದಕ್ಕೆ ಒಂದು ಒಳ್ಳೆಯ ವ್ಯವಸ್ಥೆ ಇರಬೇಕು, ಈ ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಂಡು ಗಡಿ ಭಾಗದಲ್ಲಿರತಕ್ಕ ಪ್ರದೇಶಗಳನ್ನು ಈ ಭಾಷೆಯ ಆಧಾರದ ಮೇಲೆ ಮೆಜಾರಿಟಿ ಮತ್ತು ಮೈನಾರಿಟಿ ಏನಿದ್ದರೂ ಅದನ್ನು ಬಗೆಹರಿಸು ವುದಕ್ಕೆ ಪ್ರಯತ್ನಮಾಡಬೇಕು. ಎಷ್ಟೇ ಬಗೆಹರಿಸಿದರೂ, ಈ ಪಾಪ್ಯುಲೇಷನ್ ಎಕ್ಸ್‌ಚೇಂಜ್ ಮಾಡುವಂತಹ ಕೆಟ್ಟ ಒಂದು ನೀತಿಯನ್ನನುಸರಿಸದೇ ಮೈನಾರಿಟೀಸ್‌ಗೆ ರಕ್ಷಣೆಯನ್ನು ಕೊಡ ಬೇಕಾದ್ದು ಬಹಳ ಅವಶ್ಯಕವಾಗಿರುತ್ತದೆ. ಅದಕ್ಕೆ ನಾನು ಈ ಸಭೆಯ ಮೂಲಕ ಹೇಳುತ್ತೇನೆ ಸ್ವಾಮಿ, ಈ ಗಡಿಬಿಡಿಯಲ್ಲಿ ಒತ್ತಾಯ ತಂದು ಅನುಚಿತವಾದ ರೀತಿಯಲ್ಲಿ ವರ್ತಿಸಿ, ಏನೋ ಮಹಾರಾಷ್ಟ್ರದ ಭಾಗಗಳನ್ನೆಲ್ಲಾ ಕರ್ನಾಟಕದವರು ತೆಗೆದುಕೊಂಡುಬಿಟ್ಟಿದ್ದಾರೆ ಅನ್ನುವ ರೀತಿ ಯಲ್ಲಿ ಹೋರಾಟ, ಚಳುವಳಿ ಮಾಡಿ ಕೇಂದ್ರ ಸರ್ಕಾರದವರನ್ನು—ಜೋನಲ್ ಕೌನ್ಸಿಲ್ ಇದ್ದ ಮೇಲೆ ಮತ್ತೊಂದು ಕಮಿಷನ್ ನೇಮಕ ಮಾಡಿದ್ದೇ ತಪ್ಪು ಅಂತ ನಮ್ಮ ಸ್ನೇಹಿತರು ಹೇಳುತ್ತಾರೆ—ಅದು ಏನೇ ಇರಲಿ, ಮಾಡಿದ ಮೇಲೆ ತಾವು ಬೇಕು ಅಂತ ಕೇಳಿದಂತಹ ಬೆಳಗಾಂ ತಮಗೆ ಬಂದಿಲ್ಲ ಎಂಬ ಒಂದೇ ಕಾರಣಕ್ಕಾಗಿ ಇವತ್ತು ಶ್ರೀಮಾನ್ ಚವಾಣ್ ಮತ್ತು ಅವರ ಇತರ ಸ್ನೇಹಿತರು ಏನೊಂದು ನಿಲುವನ್ನು ತೆಗೆದುಕೊಂಡಿದ್ದಾರೆ ಅದು ಖಂಡನೀಯ, ಅದನ್ನು ಅವರು ಬಿಡಬೇಕು. ಮತ್ತು ಡಾನ್‌ಸೆನ್‌ಸಸ್—ರಾಷ್ಟ್ರೀಯ ಅಭಿಮತವನ್ನು ರೂಪಿಸುತ್ತೇನೆ ಅಂತ ಚವಾಣ್‌ರವರು ಏನು

ಹೇಳಿದ್ದಾರೆ, ಅದಕ್ಕೆ ಮುಂಚೆಯೇ ಅವಕಾಶ ಇತ್ತು, ಅದನ್ನು ಮೊದಲೇ ರೂಪಿಸಬಹುದಾಗಿತ್ತು. ಆಗ ಎಲ್ಲ ಕಾಂಗ್ರೆಸ್ ಮುಂಖಂಡರೂ ಇದ್ದರಲ್ಲಾ, ಕಾಂಗ್ರೆಸ್‌ನವರೇ. ಪ್ರಧಾನಿಗಳು, ಕಾಂಗ್ರೆಸ್‌ನವರೇ, ಗೃಹ ಮಂತ್ರಿಗಳು, ಕಾಂಗ್ರೆಸ್‌ನವರೇ ಮಹಾರಾಷ್ಟ್ರದಲ್ಲೂ ಮುಖ್ಯ ಮಂತ್ರಿಗಳು, ಇಲ್ಲೂ ಕಾಂಗ್ರೆಸ್ಸಿನವರೇ ಮುಖ್ಯ ಮಂತ್ರಿಗಳು ಕೇರಳದಲ್ಲಿ ಒಂದು ಕಡೆ ಬಿಟ್ಟರೆ ಬಾಕಿ ಕಡೆ ಎಲ್ಲಾ ಅವರೇ, ಅವರ ಜೊತೆಯಲ್ಲಿ ಮಾತನಾಡಿ ತೀರ್ಮಾನ ಮಾಡಿ ಅಭಿಮತವನ್ನು ರೂಪಿಸಬಹುದಾಗಿತ್ತು. ಈಗ 'ರಾಷ್ಟ್ರ ಅಭಿಮತವನ್ನು' ರೂಪಿಸುತ್ತೇನೆ ಅಂತ ಹೇಳುವುದು ತಾವೇ ಮೊದಲು ಒಪ್ಪಿಕೊಂಡಂಥ, ಬದ್ಧವಾಗಿದ್ದಂಥ ವಚನವನ್ನು ತಾವೇ ಮುರಿದು, ಈ ಒಂದು ಸ್ಥಿತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ತೊಡಗುತ್ತಾ, ಇರತಕ್ಕ ಒಂದು ಸಂಚು ಇದು ಎಂದು ಹೇಳುತ್ತೇನೆ. ಇದನ್ನು ವಿರೋಧಿಸುತ್ತಾ, ಶ್ರೀಮತಿ ಗಾಂಧೀಜಿಯವರ ಮೇಲೆ ತಮ್ಮ ಅಧಿಕಾರ ಇದೆ ಅಂತ ಹೇಳಿ ಚವಾಣ್‌ರವರು ಒತ್ತಾಯ ಮಾಡಿದರೆ, ತನ್ನ ಅಧಿಕಾರ ಎಲ್ಲಿ ಹೋಗುತ್ತದೆಯೋ ಏನೋ ಅಂತ ಅವರು ಭಯಪಡದೇ ಅವರು ವಚನ ಕೊಟ್ಟಂತೆ ಈ ವರದಿಯನ್ನು ಕಾನೂನುಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಾನು ಸೂಚನೆ ಮಾಡುವುದು ಇಷ್ಟೇ, ಅದಕ್ಕೆ ತಕ್ಕ ತಿದ್ದುಪಡಿಗಳನ್ನು ಕೊಡುತ್ತೇವೆ, ಇತರ ಭಾಗಗಳು ಎಂದರೆ ಎಸ್. ಆರ್. ಕಮಿಷನ್‌ರವರು ಕೊಟ್ಟಿರತಕ್ಕ ಭಾಗಗಳು, ಏನಿದೆ ಅದನ್ನು ಮಹಾಜನ್ ಕಮಿಷನ್ ರಿಪೋರ್ಟಿನ ಆಧಾರದ ಮೇಲೆ ಕರ್ನಾಟಕದಿಂದ ಹೊರಗೆ ತಳ್ಳುವುದು ಸೂಕ್ತವಾಗುವುದಿಲ್ಲ, ಆ ಭಾಗಗಳನ್ನು ಉಳಿಸಿಕೊಳ್ಳಬೇಕು, ಇನ್ನು ಬರಬೇಕಾದ ಭಾಗಗಳನ್ನು ನಾವು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿ ನನಗೆ ಈ ವರದಿಯ ಮೇಲೆ ಮಾತನಾಡುವುದಕ್ಕೆ ಮೊದಲು ಮಾತನಾಡುವಂತಹ ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ವಿರೋಧ ಪಕ್ಷದ ಗೆಳೆಯರಿಗೂ ಮತ್ತು ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

† ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಅಧ್ಯಕ್ಷರೇ, ಸಭೆಯ ಮುಂದಿರುವ ಮಹಾಜನ್ ಶಿಫಾರ್ಸುಗಳನ್ನು ನಾವು ಎರಡು ವಿಭಾಗವಾಗಿ ಭಾಗಮಾಡಬಹುದಾಗಿದೆ. ಒಂದು ಕೇರಳ-ಕರ್ನಾಟಕ ಗಡೀ ವಿಭಾಗಗಳಿಗೆ ಸಂಬಂಧಪಟ್ಟ ಶಿಫಾರ್ಸುಗಳು. ಎರಡನೆಯದು ಮೈಸೂರು—ಮಹಾರಾಷ್ಟ್ರ ಗಡೀ ವಿಭಾಗಗಳಿಗೆ ಸಂಬಂಧಪಟ್ಟ ಶಿಫಾರ್ಸುಗಳು. ಈ ಕೇರಳ—ಮೈಸೂರು ಗಡೀ ವಿಭಾಗಗಳ ಬಗ್ಗೆ ಮಾಡಿರತಕ್ಕ ಶಿಫಾರ್ಸುಗಳನ್ನು ಅವು ಸಂಪೂರ್ಣವಾಗಿ ನ್ಯಾಯಬದ್ಧವಾದವುಗಳೆಂದು ನಾವೆಲ್ಲರೂ ಅವುಗಳನ್ನು ಒಪ್ಪಲೇ ಬೇಕು. ಹಾಗೆ ಒಪ್ಪತಕ್ಕದ್ದೂ ಸರಿಯೆ. ಆದರೆ ಆ ಶಿಫಾರ್ಸುಗಳನ್ನು ಕೇರಳ ಸರ್ಕಾರದವರು ತಾವು ಒಪ್ಪುವುದಿಲ್ಲ ಎಂದು ಹೇಳುವುದಕ್ಕೆ ಕಾರಣವಾದರೂ ಏನು? ಅವರಿಗೆ ತಮ್ಮ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ತಮ್ಮಲ್ಲಿ ಸಾಕಷ್ಟು ಸಾಕ್ಷ್ಯ ಸಾಹಿತ್ಯ ಆಧಾರಗಳು ಇರುವುದಿಲ್ಲವಾದ್ದರಿಂದ ಅವರು ಹೀಗೆ ನುಸುಳಿಕೊಳ್ಳುವುದಕ್ಕೆ ಪ್ರಯತ್ನಮಾಡಿದ್ದಾರೆ. ಕೇರಳದಲ್ಲಿರತಕ್ಕ ಅನೇಕ ಮಹಾಪುರುಷರು ಮಹಾಜನ್ ಶಿಫಾರ್ಸುಗಳನ್ನು ಅವರು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ನ್ಯಾಯಬದ್ಧವಾಗಿ ಕಾಣುತ್ತದೆಂದು ಹೇಳಿರತಕ್ಕ ಬಗ್ಗೆ ಸರ್ಕಾರಿ ದಾಖಲೆಗಳಿವೆ. ಹಿಂದಿನಿಂದಲೂ ಅವರು ಆ ಭಾಗ ಕರ್ನಾಟಕಕ್ಕೇ ಸೇರತಕ್ಕದ್ದು ಎಂಬುದನ್ನು ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಆದರೆ ಈ ದಿವಸ ಕೇರಳದವರು ಅಂದರೆ, ಅಧಿಕಾರದಲ್ಲಿರತಕ್ಕ ಕೆಲವರು ತಮ್ಮ ಒಂದು ಅಧಿಕಾರವನ್ನು ಉಳಿಸಿಕೊಳ್ಳಲು, ಆ ಭಾಗ ಕೇರಳಕ್ಕೇ ಸೇರಬೇಕು, ಅದು ಅಲ್ಲೇ ಉಳಿಯಬೇಕೆಂದು ಮಾಡುತ್ತಿರುವ ವಾದವನ್ನು ಕೇಂದ್ರ ಸರ್ಕಾರ ಒಪ್ಪುವುದಾದರೆ ನಮ್ಮ ರಾಷ್ಟ್ರಕ್ಕೆ ಅದಕ್ಕಿಂತಲೂ ಹೆಚ್ಚಿನ ದೌರ್ಭಾಗ್ಯ ಮತ್ತೊಂದಿಲ್ಲ. ಈ ದಿವಸ ಆ ದಿವಂಗತ ಮಹಾಜನ್‌ರವರು ಎಲ್ಲರ ಹೃದಯದಲ್ಲೂ ಮನೆಮಾಡಿಕೊಂಡಿದ್ದಾರೆ. ಅವರ ನಿಸ್ಪೃಹ ಶಿಫಾರ್ಸುಗಳನ್ನು ಎಲ್ಲರೂ ಒಪ್ಪಲೇ ಬೇಕು. ಅವರ ಸಲಹೆಯಂತೆ ಕೇರಳದಿಂದ ನಮಗೆ ಅಷ್ಟು ಭಾಗ ಬರಲೇಬೇಕು.

ಇನ್ನು ಕರ್ನಾಟಕ—ಮಹಾರಾಷ್ಟ್ರದ ಗಡೀ ವಿಭಾಗದ ವಿಚಾರಕ್ಕೆ ಬಂದರೆ—ಈ ಬಗ್ಗೆ ಅದರ ಹಿನ್ನೆಲೆ—ಮುನ್ನೆಲೆಗಳನ್ನೆಲ್ಲಾ ಶ್ರೀ ಗೋಪಾಲಗೌಡರು ವಿವರವಾಗಿ ತಿಳಿಸಿದ್ದಾರೆ. ಅವರು ಹೇಳಿರತಕ್ಕದನ್ನು ಎಲ್ಲರೂ ಒಪ್ಪಲೇ ಬೇಕು. ಈ ಹಿಂದೆ ಈ ಒನ್‌ಮ್ಯಾನ್ ಕಮಿಷನ್ ಎಂಬುದನ್ನು ಯಾವಾಗ ಕೇಂದ್ರ ಸರ್ಕಾರದವರು ನೇಮಕ ಮಾಡುತ್ತಾರೆಂದಾಯಿತೋ ಆಗ ಇಲ್ಲಿನ ಶಾಸನ ಸಭಾ ಸದಸ್ಯರಲ್ಲಿ ಕೆಲವರು ಅದನ್ನು ಅರೆಮನಸ್ಸಿನಿಂದ ಒಪ್ಪಿದವರು ಕೆಲವರು, ಇನ್ನು ಕೆಲವರು ಅದನ್ನು ಸಂಪೂರ್ಣವಾಗಿ ವಿರೋಧಿಸಿದ್ದರು. ಹಾಗೆ ವಿರೋಧಿಸಿದವರಲ್ಲಿ ನಾನೂ ಕೂಡ ಒಬ್ಬನಾಗಿದ್ದೆ. ಆ ದಿವಸ ನಾನು ಈಗ ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಲಿಕ್ಕೆ ಅಕಾಲವಾಗಿದೆ. ಇದನ್ನು ಎತ್ತಲೇ

(ಶ್ರೀ ಎ. ಜೆ. ದೊಡ್ಡಮೇಟಿ)

ಕೂಡದು ಎಂದು ವಾದಮಾಡಿದ್ದೇನೆ. ಈ ವಿಚಾರದಲ್ಲಿ ಚಳವಳಿ ಕೂಡ ಮಾಡಿ ನಾನು ತುರಂಗ ವಾಸವನ್ನೂ ಕೂಡ ಮಾಡಿದೆ. ಆ ಸಂದರ್ಭದಲ್ಲಿ ಇಲ್ಲಿರತಕ್ಕ ನನ್ನ ಕೆಲವು ಮಾನ್ಯ ಸ್ನೇಹಿತರು ಆ ನೇಮಕವನ್ನು ನಾನು ಒಪ್ಪುತ್ತೇನೆ ಅನ್ನಿ, ಇಲ್ಲವಾದರೆ ಇಲ್ಲ ಎಂದು ಹೇಳಿ, ಅದಕ್ಕೇಕೆ ಚಳವಳಿ ಮಾಡಬೇಕೆಂದು ಹೇಳುತ್ತಿದ್ದರು. ಆದರೆ ಆ ಮಹಾರಾಷ್ಟ್ರೀಯರ ಒತ್ತಾಯಕ್ಕೆ ಮಣಿದು ಕೇಂದ್ರ ಸರ್ಕಾರದವರು ಈ ಒಂದು ಆಯೋಗವನ್ನು ರಚಿಸಿದರು. ಅದರಲ್ಲಿ ಆ ಸೇನಾಪತಿ ಭಾಪಟ್ಬರ ಒತ್ತಾಯವೇ ಜಾಸ್ತಿಯಾಗಿತ್ತು. ಅದರಿಂದ ಆಯೋಗ ಒಂದನ್ನು ರಚಿಸಿದರು. ಆದದ್ದು ಆಯಿತು. ಈ ದಿವಸ ಇದರಲ್ಲಿ ಎರಡಭಿಪ್ರಾಯವಿಲ್ಲ. ಈ ವಿಚಾರದಲ್ಲಿ ನಮ್ಮ ನಾಯಕರು ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಇದಕ್ಕೆ ಒಂದು ಅಖೈರು ನಿಲುವನ್ನು ಹೇಗಾದರೂ ಮಾಡಿ ತಾಳಲೇಬೇಕೆಂದು ಈ ವಿಚಾರದಲ್ಲಿ ಒಂದು ಅಂತಿಮ ತೀರ್ಮಾನ ಕೈಗೊಳ್ಳಲೇಬೇಕೆಂದು ಆಯೋಗವನ್ನು ರಚಿಸಿದ ಕೂಡಲೇ ಅದೇನೂ ತೀರ್ಮಾನ ಕೊಟ್ಟರೂ ಕೊಡಲಿ ಅದನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆಂದು ಅದಕ್ಕೆ ಒಪ್ಪಿಗೆ ಕೊಟ್ಟರು. ಆದರೆ ಹಾಗೆ ಈ ಕಮಿಷನ್ನನ್ನು ನೇಮಕ ಮಾಡತಕ್ಕ ಕಾಲದಲ್ಲ ಮಹಾ ರಾಷ್ಟ್ರೀಯರೆಲ್ಲರ ನಿಲುವೇನಿತ್ತೆಂಬುದು ತಮಗೆಲ್ಲರಿಗೂ ಗೊತ್ತೇ ಇದೆ. ಇತ್ತೀಚೆಗೆ ನಮ್ಮ ಸರ್ಕಾರದವರು ಅನೇಕ ಅಂಕೆಸಂಖ್ಯೆಗಳನ್ನು ಈ ವಿಚಾರದಲ್ಲಿ ಒದಗಿಸಿದ್ದಾರೆ. ಅವುಗಳನ್ನು ಬಹಳ ಕೂಲಂಕಷವಾಗಿ ಹಿಂದೆ ಮಾತನಾಡಿದ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಆಯೋಗವನ್ನು ರಚಿಸಲು ಮೊದಲು ಬೊಬ್ಬೆ ಹಚ್ಚಿದ ಮಹರಾಷ್ಟ್ರೀಯರು ಇಂದು ಅದರ ವರದಿ ಬಂದ ಮೇಲೆ ಅದು ತಮಗೆ ರುಚಿಕರವಾಗಿಲ್ಲವೆಂದು ಮತ್ತೆ ಅದೇ ಬೊಬ್ಬೆಯನ್ನು ಷುರುಮಾಡಿದ್ದಾರೆ. ಅಷ್ಟೇ ಅಲ್ಲ, ಅವರು ಅಂದರೆ ಮಹರಾಷ್ಟ್ರ ಸರ್ಕಾರ ಮತ್ತು ಶಾಸನ ಸಭೆಗಳ ಸದಸ್ಯರೆಲ್ಲರೂ ಏಕಮತದಿಂದ ಮಹಾ ಜನ್ ವರದಿಯನ್ನು ತಿರಸ್ಕಾರಮಾಡಬೇಕೆಂದು ಹೇಳಿ ಆ ಬಗ್ಗೆ ಒಂದು ಸರ್ವಾನುಮತ ನಿರ್ಣಯ ವನ್ನೂ ಸಹಾ ಮಾಡಿದ್ದಾರೆ. ಮೊದಲು ಸರ್ವಾನುಮತದಿಂದ ಆಯೋಗದ ನೇಮಕವನ್ನು ಒಪ್ಪಿ ಈಗ ಸರ್ವಾನುಮತದಿಂದ ಅದರ ವರದಿಯನ್ನು ವಿರೋಧಿಸಿದ್ದಾರೆ. ಆದರೆ ನಾನು ಆ ಮಹಾರಾಷ್ಟ್ರ ಬಂಧುಗಳನ್ನು ಒಂದು ಪ್ರಶ್ನೆ ಕೇಳುತ್ತೇನೆ—ಅದೇನೆಂದರೆ, ಅವರು ಈ ವರದಿಯನ್ನ ಒಪ್ಪಿಕೊಂಡರೆ ಅವರಿಗಾಗತಕ್ಕ ಹಾನಿಯಾದರೂ ಏನು ಎಂದು ? ನಾನೇನಾದರೂ ಹಾಗೆ ಆ ಮಹಾರಾಷ್ಟ್ರದ ಮುಖ್ಯ ಮಂತ್ರಿಯಾಗಿದ್ದರೆ ಮೈಸೂರಿನ ಮುಖ್ಯ ಮಂತ್ರಿಗಳಿಗಿಂತಲೂ ಹೆಚ್ಚಿನ ಸಂತೋಷದಿಂದ ನಾನು ಈ ವರದಿಯನ್ನು ಹೃತ್ಪೂರ್ವಕದಿಂದ ಸ್ವಾಗತ ಮಾಡುತ್ತಿದ್ದೆನು. ಆದರೆ ಈ ದಿವಸ ಮಹಾರಾಷ್ಟ್ರದವರು ಒಂದು ಹಗಲು ಕನಸನ್ನು ಕಾಣುತ್ತಿದ್ದಾರೆ. ಆ ಆಕಾಶದಲ್ಲಿರತಕ್ಕ ಚಂದ್ರನು ತಲೆಕೆಳಗಾದರೂ ಆ ಮಹಾರಾಷ್ಟ್ರೀಯರಿಗೆ ನಾವು ಬೆಳಗಾಂ ಮತ್ತು ಕಾರವಾರ ಗಳನ್ನು ಬಿಟ್ಟು ಕೊಡುವುದಿಲ್ಲ; ಇದು ಶತಸ್ಸಿದ್ಧ. ಆಕಾಶದಲ್ಲಿರತಕ್ಕ ಚಂದ್ರನನ್ನು ಬೇಡುವುದು ಎಷ್ಟು ದಡ್ಡತನವೋ ಅವರು ಈ ಬೆಳಗಾಂ ಮತ್ತು ಕಾರವಾರಗಳನ್ನು ಬೇಡುವುದೂ ಅಷ್ಟೇ ದಡ್ಡತನ. ಹಾಗೂ ಅದು ನಮ್ಮ ದೇಶದ ದೌರ್ಭಾಗ್ಯ. ಆದರೆ ನಾವೊಂದು ವೇಳೆ ಆ ಮಂಗಳ ರಾಜ್ಯಕ್ಕೇ ಹೋಗಲಿ ಅಥವಾ ಆ ಶುಕ್ರ ರಾಜ್ಯಕ್ಕೇ ಹೋಗಲಿ ಅಲ್ಲಿನ ಅಧಿಕಾರವನ್ನು ಬೇಕಾದರೆ ನಾವು ಆ ಚವಾಣರಿಗೆ ಬಿಟ್ಟುಕೊಟ್ಟರೂ ಬಿಟ್ಟುಕೊಟ್ಟೇವು, ಆದರೆ ಬೆಳಗಾಂ ಮತ್ತು ಕಾರವಾರಗಳನ್ನು ನಾವು ಅವರಿಗೆ ಎಂದೆಂದಿಗೂ ಬಿಟ್ಟುಕೊಡೆವು, ಅವು ಅವರಿಗೆ ಹೋಗಲಿಕ್ಕೆ ಶಕ್ಯವೇ ಇಲ್ಲ. ಇವಿಷ್ಟೂ ಸತ್ಯವಾದ ಮಾತುಗಳು. ಆದರೆ ಮಹಾರಾಷ್ಟ್ರದಲ್ಲಿರತಕ್ಕವರೆಲ್ಲರೂ ಇಂಥ ಅನ್ಯಾಯದಿಂದ ವಾದ ಮಾಡತಕ್ಕವರು ಎಂದು ನಾನು ಎಂದಿಗೂ ಹೇಳಲಾರೆ. ಅಲ್ಲಿಯೂ ನ್ಯಾಯವಂತರೂ, ಸತ್ಯವಂತರೂ ಇದ್ದಾರೆ. ಆದರೆ ಅವರೆಲ್ಲರೂ ಸರ್ಕಾರದಿಂದ ಹೊರಗಿದ್ದಾರೆ. ಆ ಮಹಾರಾಷ್ಟ್ರದಲ್ಲಿರತಕ್ಕ ಶ್ರೀ ಅಣೆ ಮತ್ತು ಪಟ್ವರ್ಧನ್ ಇವರೆಲ್ಲರೂ ಬಹಳ ನ್ಯಾಯಬದ್ಧವಾಗೇ ಮಾತನಾಡಿದ್ದಾರೆ, ಅವರು ಮಹಾಜನ್ ಶಿಫಾರ್ಸುಗಳನ್ನು ಸಂಪೂರ್ಣವಾಗಿ ಮಹಾರಾಷ್ಟ್ರೀಯರೂ ಕೂಡ ಒಪ್ಪಲೇಬೇಕೆಂದು ಹೇಳಿದ್ದಾರೆ. ಹೀಗೆ ನ್ಯಾಯಕ್ಕೆ ಬೆಲೆ ಕೊಡತಕ್ಕ ಮಹನೀಯರು ಅಲ್ಲಿಯೂ ಇದ್ದಾರೆ. ನಾವು ಆ ಶಿವಾಜಿಯ ವಂಶೀಕರು ಎಂದು ಹೇಳಿಕೊಳ್ಳತಕ್ಕ ಈ ಮಹಾ ರಾಷ್ಟ್ರೀಯರೇನಿದ್ದಾರೆ ಅವರು ಹೇಳತಕ್ಕ ಆ ಶಿವಾಜಿ ಕೇವಲ ಮಹಾರಾಷ್ಟ್ರಕ್ಕೆ ಮಾತ್ರ ಸೇರಿದ ವ್ಯಕ್ತಿಯಲ್ಲ. ಆತನು ಅಖಿಲ ಭಾರತಕ್ಕೆ ಸೇರಿದಂಥ ವ್ಯಕ್ತಿ. ಅಂಥ ಮಹಾತ್ಮನ ಹೆಸರಲ್ಲಿ ಈ ದಿವಸ ಈ ಮಹಾರಾಷ್ಟ್ರೀಯರು ಶಿವಸೇನೆ ಎಂಬ ಒಂದು ಚಳುವಳಿಗಾರರ ಗುಂಪನ್ನು ಕಟ್ಟಿದ್ದಾರೆ. ಅನ್ಯಭಾಷೆಯನ್ನಾಡತಕ್ಕ ಜನರಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ಇದೇ ರೀತಿ ನಾಳೆ ಒಂದು ಹಿಂದೀ ಸೇನೆ, ಒಬ್ಬರು ತಮ್ಮ ಕನ್ನಡ ಸೇನೆ, ಇತ್ಯಾದಿ ಸೇನೆಗಳನ್ನು ಮಾಡಿಕೊಂಡರೆ ಮುಂದೆ ಇದು ದೇಶಾದ್ಯಂತವೂ ಹರಡಿ ಕೊನೆಗೆ ಮನೆ ಮನೆಗೊಂದು ಸೇನೆಗಳಾಗತಕ್ಕ ಪ್ರಸಂಗದಲ್ಲಿ ನಿಲ್ಲ ಬಹುದು. ಆಗ ಈ ದೇಶಕ್ಕೆ ಯಾವ ಮಿಲಟರಿಯಾಗಲಿ—ದಂಡನಾಯಕರಾಗಲೀ ಬೇಕಾಗುವುದಿಲ್ಲ.

ಹೀಗಾದರೆ ದೇಶ ಉಳಿಯುವುದಿಲ್ಲ. ಆದುದರಿಂದ ಇದು ಸರ್ವಥಾ ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಆ ಮಹಾರಾಷ್ಟ್ರದ ಜನರಿಗೆ ನಿಜವಾಗಿಯೂ ಅಂಥ ಕಳಕಳಿಯ ದೇಶಪ್ರೇಮವಿದ್ದರೆ ಅವರು ಈ ವರದಿಯನ್ನು ಸರ್ವತೋಮುಖವಾಗಿ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ಇದು ಒಬ್ಬೊಬ್ಬರ ಪ್ರಶ್ನೆಯಲ್ಲ. ಇಡೀ ದೇಶದಲ್ಲಿರತಕ್ಕ ಜನ ಇದರ ಬಿಸಿಯನ್ನು ಅನುಭವಿಸಬೇಕಾಗುತ್ತದೆ. ಈಗಾಗಲೇ ಮುಂಬೈನಲ್ಲಿ ಈಗಾಗಲೇ 8 ರೂಪಾಯಿಗೆ ಒಂದು ಕಿಲೋ ಅಕ್ಕಿ ಮಾರಾಟವಾಗುತ್ತಿದೆ. ಇನ್ನು ಕೆಲವು ಕಡೆ 6 ರೂಪಾಯಿಗೆ ಒಂದು ಕಿಲೋ ಮಾರಾಟವಾಗುತ್ತಿದೆ. ನಾನು ಮೊನ್ನೆತಾನೆ ಮುಂಬೈಗೆ ಹೋಗಿದ್ದೆ. ನಾನು ನನ್ನ ಮಗಳನ್ನು ಮಹಾರಾಷ್ಟ್ರಕ್ಕೆ ಕೊಟ್ಟಿದ್ದೇನೆ. ನನ್ನ ಅಳಿಯ ಮಹಾರಾಷ್ಟ್ರದವನು. ಅಲ್ಲಿ ಐದೂವರೆ ರೂಪಾಯಿಗೆ ಒಂದು ಕೇಜಿ ಸಕ್ಕರೆ. ಮಹಾರಾಷ್ಟ್ರೀಯರ ಗಮನ ಇತ್ತಕಡೆಗೂ ಸ್ವಲ್ಪ ಹೋದರೆ ಉತ್ತಮವಾದೀತು. ಒಂದು ಸಾರಿ ನಾನು ಇದನ್ನು ಆಲೋಚನೆ ಮಾಡಿದಾಗ ಆ ಮರಾಠೀ ಜನರು ಜನರ ಮನಸ್ಸು ಈ ಮುಖ್ಯವಾಗಿ ಗಗನಕ್ಕೇರಿರತಕ್ಕ ಧಾರಣೆವಾಸಿಗಳ ಕಡೆಗೆ ಅವರ ಗಮನವನ್ನು ಬಿಡದಂತೆ ಬೇರೆ ಕಡೆ ಸೆಳೆಯಲು ಈ ಒಂದು ಅನವಶ್ಯಕ ವಿಚಾರದ ಗೊಂದಲವನ್ನೆಬ್ಬಿಸಿರಬೇಕೆಂದು ನನಗೆ ಅನಿಸುತ್ತದೆ. ಅವರು ಯಾವಾತ್ತೂ ಪ್ರಮುಖ ವಿಚಾರಗಳನ್ನು ಮೂಲೆಗೊತ್ತಿ ಅಪ್ರಧಾನವಾದ ವಿಚಾರಗಳಿಗೇ ಹೆಚ್ಚಿನ ಗಮನ ಕೊಡುತ್ತಿದ್ದಾರೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಕನ್ನಡದ ಜನರು ಮಹಾರಾಷ್ಟ್ರದಲ್ಲೇ ಇರಲಿ ಅಥವಾ ಮರಾಠೀ ಮಾತನಾಡತಕ್ಕ ಜನರು ಕೂಲಿಗಾರರೂ ಕನ್ನಡ ನಾಡಿನಲ್ಲೇ ಇರಲಿ ಇದು ಇಬ್ಬರ ಸೌಜನ್ಯವನ್ನೂ ಅವಲಂಬಿಸಿ ನಡೆಯಬೇಕಾದ ವಿಚಾರವಾಗಿದೆ. ಇಬ್ಬರ ಹಿತಸಂಬಂಧವೂ ಇದರಲ್ಲಿ ಬೆರೆತಿದೆ. ನಾವು ಈ ವರದಿಯನ್ನು ನಿಜವಾಗಿಯೂ ಒಳಹೊಕ್ಕು ವಿಚಾರ ಮಾಡುವುದಾದರೆ ಶ್ರೀ ಗೋಪಾಲಗೌಡರು ಹೇಳಿದಂತೆ ಈ ವರದಿಯನ್ನು ಒಪ್ಪುವುದರಿಂದ ನಮ್ಮ ಮೈಸೂರಿಗೆ—ಕನ್ನಡಿಗರಿಗೆ ಬಹಳ ಅನ್ಯಾಯವಾಗಿದೆ ಎಂಬುದು ನಿಜವಾದ ಮಾತು. ಮಹಾರಾಷ್ಟ್ರಕ್ಕೆ ಇಂದು ನಮ್ಮ ಕರ್ಣಾಟಕದ ಕೆಲವು ಭಾಗಗಳು ಹೋಗಬೇಕೆಂದು ಮಾಡಿರುವುದು ನ್ಯಾಯವಾಗಿಲ್ಲ. ಅದರಲ್ಲೂ ಸುಮಾರು ಮೂರೂವರೆ ಕೋಟಿಯಷ್ಟು ಇನ್‌ಕಂ ಟ್ಯಾಕ್ಸ್ ಕೊಡತಕ್ಕಂತಹ ನಿಪ್ಪಾಣಿಯನ್ನು ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಇದರಲ್ಲಿ ಮಾಡಿದ್ದಾರೆ. ಈಗ ನಿಪ್ಪಾಣಿ ನಮ್ಮ ಕೈ ಬಿಟ್ಟುಹೋಗುತ್ತದೆ. ಧಾರವಾಡದಿಂದ ಬೆಳಗಾಂ ಕಡೆಗೆ ರೈಲಿನಲ್ಲಿ ಹೋಗಬೇಕಾದರೆ ಲೋಂಡಾದ ಮೂಲಕ ಹೋಗುವಾಗ ಮೂರು ನಾಲ್ಕು ರೈಲ್ವೆ ಸ್ಟೇಷನ್‌ಗಳು ಸಿಗುತ್ತವೆ. ಅವೆಲ್ಲಾ ನಮ್ಮ ಕೈ ಬಿಡುತ್ತವೆ. ಮತ್ತು ಬೆಳಗಾಂಗೆ ಹೋಗಬೇಕಾದರೆ ಮಹಾರಾಷ್ಟ್ರದ ಹದ್ದಿನೊಳಗೇ ಹೋಗಬೇಕಾಗುತ್ತದೆ. ಇದನ್ನೆಲ್ಲಾ ವಿಚಾರ ಮಾಡಿಯೇ ಮಾನ್ಯ ಮಹಾಜನ್‌ರವರು ಒಂದು ತೀರ್ಪು ಕೊಟ್ಟಿದ್ದಾರೆ. ಆ ತೀರ್ಪನ್ನು ನಾವು ಈಗ ಒಪ್ಪುವುದಿಲ್ಲ ಎಂದು ಹೇಳಿದರೆ ಏನಾಗುತ್ತದೆ ಇದನ್ನು ತಾವು ವಿಚಾರ ಮಾಡಿ. ಒಂದು ಬಾಯಲ್ಲಿ ಇದನ್ನು ತೀರ್ಪೆಂದು ಒಪ್ಪಿಕೊಳ್ಳಿ ಎಂದು ಹೇಳಿ ಇನ್ನೊಂದು ಬಾಯಲ್ಲಿ ಈ ಮಾತನ್ನು ಎತ್ತುವುದು ಬೇಡ ಎಂದರೆ ಹೇಗೆ ? ಈಗ ಖಾನಾಪುರ ಹಾಗೂ ನಿಪ್ಪಾಣಿ ಇಂತಹ ಕೆಲವು ಪ್ರದೇಶಗಳು ನಮ್ಮ ಕೈಯಿಂದ ಬಿಟ್ಟು ಹೋಗುತ್ತದೆ. ಒಮ್ಮೆ ಕಮಿಷನ್ನಿನವರು ಇವನ್ನೆಲ್ಲಾ ವಿಚಾರ ಮಾಡುವಾಗ ಎಲ್ಲ ವಿಚಾರಗಳನ್ನೂ ಗಮನಕ್ಕೆ ತೆಗೆದುಕೊಂಡು ಅವರು ತಮ್ಮ ಒಂದು ಅಭಿಪ್ರಾಯವನ್ನು ಇವರಲ್ಲಿ ಕೊಟ್ಟಿದ್ದಾರೆ. ಇದನ್ನು ತೀವ್ರವಾಗಿ ಪಾರ್ಲಿಮೆಂಟಿನಲ್ಲಿ ವಿಚಾರ ಮಾಡುವಾಗ ಇವರ ಶಿಫಾರಸುಗಳನ್ನು ಒಪ್ಪಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಪಾರ್ಲಿಮೆಂಟಿನ ಮುಂದೆ ಈ ಬಿಲ್ಲು ಬಂದಾಗ ಆಗ ಖಾನಾಪುರ ಹಾಗೂ ನಿಪ್ಪಾಣಿ ನಮಗೆ ಸೇರಿದ್ದು ಎಂದು ಇದಕ್ಕೆ ತಿದ್ದುಪಡಿಯನ್ನಾದರೂ ತರಲು ಸೂಚನೆಗಳನ್ನು ಕೊಡುತ್ತೀರೋ ಇಲ್ಲವೋ ?

ಶ್ರೀ ಎ. ಜೆ. ದೊಡ್ಡಮೇಟಿ.—ಇದು ಬೇರೆ ಮಾತು. ಈಗ ಕಮಿಷನ್ನಿನವರು ಕೊಟ್ಟಿರುವ ಶಿಫಾರಸುಗಳನ್ನು ಒಪ್ಪುತ್ತೀರೋ ಇಲ್ಲವೋ ! ಇದರ ಬಗ್ಗೆ ಕೆಲವರು ಹೇಳುವಾಗ ಸಮಗ್ರವಾಗಿ ಇದನ್ನು ಒಪ್ಪಬೇಕು ಎಂದು, ಇನ್ನು ಕೆಲವರು ಕೆಲವು ತಿದ್ದುಪಡಿಗಳನ್ನು ಮಾಡಿ ಒಪ್ಪಬೇಕು ಎಂದು ಹೇಳುತ್ತಿದ್ದಾರೆ. ಇದೇನು ಹುಡುಗಾಟಿಕೆ ವಿಚಾರವೇ ? ಇದಕ್ಕಾಗಿ ಒಂದು ಟ್ರೂಸ್ ಎಂದು ಏನಾದರೂ ಮಾಡಿದ್ದೇವೆಯೇ ? ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕದಂರವರು status quo ಹೇಗೆ ಇತ್ತೋ ಹಾಗೇ ಉಳಿಯಲಿ ಎಂದೂ ಹೇಳುತ್ತಾರೆ. ಇನ್ನು ಮುಂದೆ ಏನೇನಾಗುತ್ತೊ ಮತ್ತು ಏನು ಬರುತ್ತೋ ಹೇಳುವಂತಿಲ್ಲ.

ಹೀಗಾಗಿ ಹಿಂದೆ ನಮಗೆ ಕಾಸರಗೋಡು ಬರಬೇಕಾಗಿದ್ದುದು ನಮ್ಮ ಕೈಬಿಟ್ಟು ಹೋಯಿತು. ಈಗ ಪುನಃ ಕರ್ಣಾಟಕಕ್ಕೆ ಕಾಸರಗೋಡು ಸೇರಬೇಕು ಎಂದು ಈ ಕಮಿಷನ್ನಿನವರು ಹೇಳಿದ್ದಾರೆ. ಅದೂ ಅಲ್ಲದೆ ಬಹು ಕಾಲದಿಂದಲೂ ಕಾಸರಗೋಡಿನ ಜನ ನಮ್ಮ ಕರ್ಣಾಟಕಕ್ಕೆ ಸೇರಬೇಕು ಎಂದು

(ಶ್ರೀ ಎ. ಜೆ. ದೊಡ್ಡಮೇಟಿ)

ಮೊದಲಿಂದಲೂ ಹೇಳುತ್ತಲೇ ಬರುತ್ತಿದ್ದಾರೆ. ಇದರಿಂದ ಕಮಿಷನ್ನಿನ ಮುಂದೆ ಕಾಸರಗೋಡಿನವರು ಸರಿಯಾಗಿ ವಿವರಗಳನ್ನು ಕೊಟ್ಟು ವಿಚಾರ ಮಾಡುವಂತೆ ಒತ್ತಾಯ ಮಾಡಿದರು. ಅದರಂತೆ ಕಮಿಷನ್‌ನವರೂ ಕೂಡ ಪರಿಶೀಲನೆ ಮಾಡಿ ಕಾಸರಗೋಡು ನಮ್ಮ ಕರ್ಣಾಟಕಕ್ಕೆ ಸೇರಬೇಕೆಂದು ಹೇಳಿದ್ದಾರೆ. ಕಮಿಷನ್ ತೀರ್ಪನ್ನು ಯಾರೂ ಒಪ್ಪಬಾರದು ಎಂದು ಈಗ ಹೇಳಿದರೆ ಹೇಗೆ? ಮಹಾರಾಷ್ಟ್ರದವರೇ ಮೊದಲಿಗೆ ಕಮಿಷನ್ ಮಾಡಬೇಕು ಎಂದು ಹೇಳಿದವರು. ಕಮಿಷನ್ ಆದಮೇಲೆ ಅವರ ವರದಿ ಬಂದಮೇಲೆ ಈಗ ಅದನ್ನು ಒಪ್ಪಕೂಡದು ಎಂದು ಹೇಳಿದರೆ ಅದು ಒಂದಕ್ಕೊಂದು ವಿರೋಧಾಭಾಸವಾಗುವುದಿಲ್ಲವೇ ? ಇದರಿಂದ ಸತ್ಯಕ್ಕೆ ಎಲ್ಲಿಯಾದರೂ ಬೆಲೆ ಇದೆಯೇ ? ನ್ಯಾಯಕ್ಕೆ ಬೆಲೆ ಇದೆಯೇ ? ಇದನ್ನು ತಾವು ಸ್ವಲ್ಪ ಇಲ್ಲಿ ವಿಚಾರ ಮಾಡಿ. ಇದರಲ್ಲಿ ಈ ಕಾಂಗ್ರೆಸ್, ಆ ಕಾಂಗ್ರೆಸ್ಸು, ಆ ಪಕ್ಷ, ಈ ಪಕ್ಷ, ಎನ್ನುವುದಿಲ್ಲ, ಪಕ್ಷವಲ್ಲ ಮುಖ್ಯ. ಕೆಲವರು ಪಕ್ಷದ ದೃಷ್ಟಿಯಿಂದ ಇದರ ವಿಚಾರಗಳನ್ನು ಮಾತನಾಡುತ್ತಿದ್ದಾರೆ. ಇದರಲ್ಲಿ ಪಕ್ಷಕ್ಕಿಂತ ದೇಶ ದೊಡ್ಡದು ಎನ್ನುವ ವಿಚಾರ ಗಮನಕ್ಕೆ ತೆಗೆದುಕೊಳ್ಳಬೇಕು. ಪಕ್ಷಕ್ಕಿಂತ ದೇಶದ ಹಿತ ದೊಡ್ಡದು. ಯಾವ ಪಕ್ಷವನ್ನೂ ಇದರಲ್ಲಿ ತರಬಾರದು. ನಾವೆಲ್ಲರೂ ಒಂದೇ ದೇಶದವರು ಎನ್ನುವ ಒಂದು ಭಾವನೆಯಿಂದ ಇದನ್ನು ಇಲ್ಲಿ ವಿಚಾರ ಮಾಡಬೇಕು. ಇದರಲ್ಲಿ ಕಾಂಗ್ರೆಸ್ ನಾನ್ ಕಾಂಗ್ರೆಸ್ ಎನ್ನುವ ವಿಚಾರ ಬೇಕಿಲ್ಲ. ಇದು ಇಡೀ ಕರ್ಣಾಟಕಕ್ಕೆ ಸಂಬಂಧಪಟ್ಟದ್ದು ಮತ್ತು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಇದರಲ್ಲಿ ಸಣ್ಣ ಪುಟ್ಟ ಜಗಳಗಳನ್ನು ತರಬಾರದು. ಸಣ್ಣ ಪುಟ್ಟ ಜಗಳಗಳಿಂದ ದೇಶದ ಹಿತ ಬಲಿಯಾಗಬಾರದು. ಮಹಾರಾಷ್ಟ್ರದವರು ಸೇನಾಪತಿ ಬಾಪಟ್‌ರವರನ್ನು ಮುಂದಿಟ್ಟುಕೊಂಡು ಉಪವಾಸ ಮಾಡಿಸಿ ಮೊದಲಿಗೆ ಕಮಿಷನ್ ನೇಮಕವಾಗುವಂತೆ ಮಾಡಿದವರೇ ಅವರು ಮತ್ತು ಆಗ ಇಂತಿಂತಹ ಪ್ರದೇಶಗಳು ತಮಗೆ ಬರಬೇಕು ಎಂದು ಹೇಳಿದವರೇ ಅವರು. ಆದರೆ ಈಗ ಕಮಿಷನ್ನಿನವರು ವರದಿ ಕೊಟ್ಟಮೇಲೆ ಮಹಾರಾಷ್ಟ್ರದವರು ತಮಗೆ ಬೆಳಗಾಂ ಬರಲಿಲ್ಲ ಎಂದು ಹೇಳುತ್ತ ಇವೊತ್ತು ನಾವು ಇದನ್ನು ಒಪ್ಪುವುದಿಲ್ಲ ಎಂದು ಹೇಳಿದರೆ ಇದರ ಪರಿಣಾಮವೇನಾಗುತ್ತದೆ ಇದನ್ನು ವಿಚಾರ ಮಾಡಬೇಕು. ಇಂತಹ ಕಿರಿ ಕಿರಿ ಮಾತುಗಳನ್ನು ಹಾಗೂ ಚೌಕಾಶಿ ಮಾತುಗಳನ್ನು ಮಹಾರಾಷ್ಟ್ರದವರು ಆಡಬಾರದು. ಅಲ್ಲದೆ ಈಗ ಈ ವರದಿ ನಮ್ಮ ಮುಂದೆ ಬಂದಿರುವುದರಿಂದ ನಮ್ಮ ಅಸೆಂಬ್ಲಿಯಲ್ಲಿ ಇದನ್ನು ಚರ್ಚೆ ಮಾಡಿ ಶಿಫಾರಸುಗಳನ್ನು ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಸರಕಾರಕ್ಕೆ ಒಂದು ಮಾತನ್ನು ಇಲ್ಲಿ ಹೇಳಲು ಇಚ್ಛಿಪಡುತ್ತೇನೆ. ನಾವೇನೋ ನಮ್ಮ ಶಿಫಾರಸುಗಳನ್ನು ಇಲ್ಲಿಂದ ಕಳುಹಿಸಬಹುದು. ನಮ್ಮ ಶಿಫಾರಸುಗಳನ್ನು ಪಾರ್ಲಿಮೆಂಟ್‌ನವರು ಒಪ್ಪದೇ ಇದ್ದರೆ ಏನು ಮಾಡುವುದು ಎಂದು. ಹಿಂದೆ ಕರ್ಣಾಟಕದಲ್ಲಿ ಬಾರ್ಡರಿನಲ್ಲಿ ಗಲಭೆಗಳು ನಡೆದಾಗ ಕನ್ನಡಿಗರು ಯಾವ ರೀತಿ ಆಂದೋಲನ ನಡೆಸಿದರು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ. ಕನ್ನಡಿಗರು ಎಂದೂ ಸುಮ್ಮನೆ ಕೂಡುವವರಲ್ಲ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ, ಮಹಾರಾಷ್ಟ್ರದವರೂ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಕರ್ಣಾಟಕದವರೂ ಅವರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಮಹಾರಾಷ್ಟ್ರದವರು ಈಗ ಏನು ಚಳುವಳಿ ಮಾಡುತ್ತಿದ್ದಾರೆ ಇದನ್ನು ಸರಕಾರದವರು ಒಪ್ಪುತ್ತಾರೆ ಎಂದು ನಾನು ಹೇಳುತ್ತಿಲ್ಲ. ಇಂತಹ ಚಳುವಳಿಗಳಿಂದ ಖಂಡಿತ ಹಾನಿಯಾಗುತ್ತದೆ. ಈಗ ಮಹಾರಾಷ್ಟ್ರದವರು ನಮಗೆ ಯಾವ ಪಂಚಾಯಿತಿಯೂ ಬೇಡ ಎಂದು ಹೇಳುತ್ತ ಮತ್ತೊಮ್ಮೆ ಹಿಂದೆ ಆದ ಘಟನೆಗಳನ್ನು ಇಲ್ಲಿ ಮತ್ತೆ ತರುವುದು ಬೇಡ. ನಾವು ಸ್ಪಷ್ಟವಾಗಿ ನಮ್ಮ ಅಭಿಪ್ರಾಯಗಳೇನು ಎನ್ನುವುದನ್ನು ಅವರಿಗೇ ತಿಳಿಸಿ ಬಿಡೋಣ ಮತ್ತು ಕೇಂದ್ರದವರು ಇದನ್ನೆಲ್ಲಾ ಸರಿಯಾಗಿ ವಿಚಾರ ಮಾಡಿ ಸರಿಯಾದ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವರಿಗೆ ಒಂದು ಅವಕಾಶ ಮಾಡಿಕೊಡಬೇಕು. ನಮ್ಮ ಮುಂದೆ ಒಂದು ನಿರ್ಣಯ ತಂದು ನಮ್ಮ ಅಭಿಪ್ರಾಯಗಳನ್ನು ಕೇಳುವಾಗ ನಮ್ಮ ನಿಲುವು ಏನು ಎನ್ನುವುದನ್ನು ಸ್ಪಷ್ಟವಾಗಿ ಕೇಂದ್ರದವರಿಗೆ ತಿಳಿಸಬೇಕು ಮತ್ತು ಈಗ ಮಾಡಿರುವ ಶಿಫಾರಸುಗಳನ್ನು ಒಪ್ಪುವಂತೆ ಮಾಡಬೇಕು ಎಂದು ಹೇಳುವುದರಲ್ಲಿ ಒಂದು ಒಳ್ಳೆಯ ಅರ್ಥವೂ ಇದೆ. ನನಗೆ ಇದರಲ್ಲಿ ಒಂದು ಸಂಶಯ ಬರುತ್ತಿದೆ. ಕೇಂದ್ರ ಸರಕಾರದವರು ಇದನ್ನು ತೀವ್ರವಾಗಿ ಗಮನಿಸದೇ ಇನ್ನೂ ಹತ್ತು ವರ್ಷಗಳಾಗಲಿ ಇಪ್ಪತ್ತು ವರ್ಷಗಳಾಗಲಿ ಎಂದು ಈ ಪ್ರಸಂಗವನ್ನು ಮುಂದೂಡಬಹುದು ಎಂದು ಕಾಣುತ್ತದೆ. ಇಂತಹ ಪ್ರಶ್ನೆಯನ್ನು ಸರಿಯಾಗಿ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು ಮತ್ತು ಬೇರೆ ಕಡೆ ಇದಕ್ಕಿಂತ ಇತರ ದೊಡ್ಡ ಕೆಲಸಗಳೂ ಇವೆ ಈ ದೃಷ್ಟಿಯಿಂದ ಇದಕ್ಕೆ ಒಂದು ಕಾಲಮಿತಿಯನ್ನು ಹಾಕಿ ತೆಗೆದುಕೆಳ್ಳಬೇಕು ಎಂದು ಈ ರೆಸಲ್ಯೂಷನ್‌ನ್ನು ಮುಂದಕ್ಕೆ ಹೋಗುವಂತೆ ಮಾಡಿ ಇದರಲ್ಲಿ ನಮ್ಮ ಜವಾಬುದಾರಿ ಏನಿಲ್ಲ ಮುಂದೆ ಪಾರ್ಲಿಮೆಂಟು ಸಭೆ ಸೇರಿದಾಗ ಇದನ್ನು ಒಪ್ಪಬಹುದು ಎಂದು ಹೇಳಬಹುದು. ಅದುದರಿಂದ ಈಗಲೇ ನಮ್ಮ ಸರಕಾರ ಕೇಂದ್ರ ಸರಕಾರಕ್ಕೆ ಸ್ಪಷ್ಟವಾಗಿ

ನಮ್ಮ ನಿಲುವನ್ನು ತಿಳಿಸಬೇಕು. ಈಚೆಗೆ ನಮ್ಮ ಪಿ.ಡಬ್ಲ್ಯು.ಡಿ. ಮಂತ್ರಿಗಳು ಇಲ್ಲಿ ಕೃಷ್ಣಾ ನದಿ ನೀರಿನ ವಿವಾದದ ಬಗ್ಗೆ ಕೇಂದ್ರಕ್ಕೆ ಒತ್ತಾಯ ಮಾಡುತ್ತಾ ನಮ್ಮ ನಿಲುವೇನು ಎನ್ನುವುದನ್ನು ಸ್ಪಷ್ಟ ಪಡಿಸಿ ಅವರು ಒಪ್ಪದೇ ಇದ್ದರೆ ಮುಂದೆ ಇದನ್ನು ಆರಬಿಟ್ರೇಷನ್ನಿಗೆ ತೆಗೆದುಕೊಂಡು ಹೋಗ ಬೇಕೆಂದು ಹೇಳಿದ್ದಾರೆ. ಅದರಂತೆ ಮಹಾರಾಷ್ಟ್ರದವರ ವಾದ ಹೀಗಿದೆ, ಕರ್ಣಾಟಕದವರ ವಾದ ಹೀಗಿದೆ, ಇಂತಿಷ್ಟು ದಿನಗಳಲ್ಲಿ ಇದನ್ನು ಒಪ್ಪಬೇಕು ಇಲ್ಲದೇ ಇದ್ದರೆ ಮುಂದೆ ಆಗುವ ಗೊಂದಲಗಳಿಗೆ ನೀವೇ ಕಾರಣರು ಎನ್ನುವ ಮಾತನ್ನು ಹೇಳಬೇಕು. ಇದನ್ನು ಸುಮ್ಮನೆ ಒಪ್ಪಬೇಕು ಎಂದು ಹೇಳುವು ದರಲ್ಲಿ ಅರ್ಥವಿಲ್ಲ. ನಿರ್ಣಯದ ಬಗ್ಗೆ ಒಂದು ಸರಿಯಾದ ನಿಲುವನ್ನು ನಮ್ಮ ಮುಖ್ಯ ಮಂತ್ರಿಗಳು ಕೇಂದ್ರದವರಿಗೆ ಒತ್ತಾಯದಿಂದ ಹೇಳಬೇಕು ಮತ್ತು ಈಗ ಬಂದಿರುವ ಕಮಿಷನ್ನಿನ ವರದಿಯನ್ನು ಸಂಪೂರ್ಣವಾಗಿ ಒಪ್ಪಬೇಕು ಎಂದು ಅವರು ಹೇಳಿರುವುದರಿಂದ ನಮಗೆ ಲಾಭವಾಗುತ್ತದೆ ಎಂದು ಹೇಳ ಲಿಲ್ಲ. ನಮಗೂ ಸಾಕಷ್ಟು ಹಾನಿಯಾಗಿದೆ ಎನ್ನುವುದು ವರದಿಯನ್ನು ನೋಡುವುದರಿಂದ ಗೊತ್ತಾಗು ತ್ತದೆ. ಸುಮ್ಮನೆ ಅನವಶ್ಯಕ ಗೊಂದಲಗಳಿಗೆ ಇನ್ನು ಅವಕಾಶ ಕೊಡಬಾರದು ಮತ್ತು ಸುಮ್ಮನೆ ಈ ವಿಚಾರವನ್ನು ಬೆಳೆಸಿಕೊಂಡು ಹೋಗಬಾರದು ಎನ್ನುವ ದೃಷ್ಟಿಯಿಂದ ಇದನ್ನು ಒಪ್ಪಬೇಕೆಂದು ಹೇಳುತ್ತಿದ್ದಾರೆ ಮತ್ತು ಈ ವರದಿಯಲ್ಲಿ ನೋಡುವಾಗ ನನ್ನ ಹಿಂಡಲಗಿ, ನಿಪ್ಪಾಣಿ ಇಂತಹ ಮುಖ್ಯ ಲಾಭದಾಯಕವಾದ ಭಾಗಗಳು ನಮ್ಮ ಕೈ ಬಿಟ್ಟು ಹೋಗುತ್ತವೆ ಮತ್ತು ನಮಗೆ ಬರುವ ಭಾಗ ಗಳಿಗಾಗಿ ಸುಮಾರು 4–8–10 ಲಕ್ಷದಷ್ಟು ಖರ್ಚು ಮಾಡಬೇಕಾದ ಸ್ಥಿತಿ ಬಂದಿದೆ. ಅದುದರಿಂದ ಇನ್ನು ಸುಮ್ಮನೆ ಈ ವಿವಾದವನ್ನು ಬಗೆಹರಿಸದೆ ಜಗಳವಾಡುತ್ತ ಹೋಗುವುದು ಸರಿಯಲ್ಲ ಎಂದು ಕೊನೆಯದಾಗಿ ಇದನ್ನು ಮುಗಿಸಬೇಕೆಂದು ಇದನ್ನು ಒಪ್ಪಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಮಹದೇವ್ ಜಿ. ಬಣಕಾರ (ಬ್ಯಾಡಗಿ).—ಒಂದೇಒಂದು ಪ್ರಶ್ನೆ ತಮ್ಮಲ್ಲಿ ಇಲ್ಲಿ ಕೇಳಬೇಕಾ ಗಿದೆ. ಈಗ ಒಂದೇ ಸಾರಿ ಇತ್ಯರ್ಥವಾಗಬೇಕು ಪುನಃ ಪುನಃ ಇದನ್ನು ಹೇಳುತ್ತಾ ಹೋಗಬಾರದು ಎಂದು ಹೇಳಿದಿರಿ ನಮಗೆ ಬರತಕ ಭಾಗಗಳ ಬಗ್ಗೆ ಏಕೆ ಹೇಳಲಿಲ್ಲ? ಇಲ್ಲಿ ಒಂದು ಪ್ರಶ್ನೆ ತಮ್ಮಲ್ಲಿ ಕೇಳುತ್ತೇನೆ. ನಮ್ಮ ಮನೆ ಪಕ್ಕದಲ್ಲಿ ಒಬ್ಬ ಹುಡುಗ ಇದ್ದಾನೆ, ಅವನು ಬಹಳ ಚೆಲೋ ಆಗಿರುವವನು. ಪ್ರತಿ ದಿನವೂ ಅವನು ಹೊರಡುವಾಗ ನಮ್ಮ ಮನೆಯಲ್ಲಿರುವ ಹುಡುಗಿಯ ಬಗ್ಗೆ ಬಹಳ ಮೆಚ್ಚುವ ಮಾತನ್ನು ಹೇಳುತ್ತಾ ಅವಳ ಶೀಲವನ್ನು ಹರಣ ಮಾಡಿದರೆ ನಾವು ಸುಮ್ಮನೆ ಕುಳಿತುಕೊಳ್ಳು ವುದಕ್ಕೆ ಆಗುತ್ತದೆಯೇ? ಒಂದು ಕಡೆ ಒಂದು ರೀತಿಯಾದ ಅಭಿಪ್ರಾಯ ಕೊಡುತ್ತೀರಿ. ಇದರ ಬಗ್ಗೆ ಹೇಳಿ.

ಶ್ರೀ ಎ. ಜೆ. ದೊಡ್ಡಮೇಟಿ.—ಆ ವಿಷಯ ಬೇರೆ, ಈ ವಿಷಯ ಬೇರೆ, ಈ ಹೊತ್ತಿನಲ್ಲಿ ನಾನು ಮಹಾರಾಷ್ಟ್ರಕ್ಕೂ ಪ್ರತಿಭಟನೆಮಾಡಿ ಹೇಳುವುದರ ಜೊತೆಗೆ ಕೇಂದ್ರಸರ್ಕಾರಕ್ಕೂ ಸ್ಪಷ್ಟವಾಗಿ ಹೇಳಬೇಕಾಗಿದೆ. ಒಂದು ರೀತಿ ಸ್ಥಿಮಿತವಾದ ಸರ್ಕಾರ ನಮ್ಮ ರಾಜ್ಯದಲ್ಲಿದೆ. ಇಷ್ಟು ಜಗಳ ವಾಡುತ್ತಿದ್ದರೂ ಕರ್ನಾಟಕದ ಹಿತದ ಪ್ರಶ್ನೆ ಬಂದರೆ ನಮ್ಮಲ್ಲಿ ಪಕ್ಷಭೇದವಿಲ್ಲದೆ ಎಲ್ಲರೂ ಸೇರಿ ಅದನ್ನು ಸಮರ್ಥನೆ ಮಾಡುತ್ತೇವೆ. ಒಂದು ರೀತಿಯ ಸ್ಥಿರತೆಯ ದೃಷ್ಟಿಯಿಂದ ನಾವು ಈಗ ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾದ ಎಚ್ಚರಿಕೆಯನ್ನು ಕೊಡಲಿಕ್ಕೆ ಅಪೇಕ್ಷೆಪಡುತ್ತೇನೆ. ಕಮಿಷನ್ನಿನ ಶಿಫಾರಸು ಗಳನ್ನು ಜಾರಿಯಲ್ಲಿ ತರುವುದಕ್ಕೆ ಕೇಂದ್ರಸರ್ಕಾರ ಹಿಂದೆ ಅಡಿ ಇಟ್ಟು ಹೋಗಿದ್ದೇ ಆದರೆ, ಕರ್ಣಾಟಕವು ಕೇಂದ್ರವನ್ನು ಮೀರಿ ನಿಲ್ಲುತ್ತದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಶ್ರೀಮಾನ್ ನಿಜಲಿಂಗಪ್ಪನವರೇ ಆಗಲೀ ಅಥವಾ ಯಾರು ಹೇಳಿದರೂ ಕರ್ನಾಟಕ ಜನರು ಸುಮ್ಮನೆ ಇರುವುದಿಲ್ಲ. ಕರ್ನಾಟಕ ಜನರನ್ನು ಕೆಣಕುವಂಥದ್ದು ಬಹಳ ತಪ್ಪು ಎಂಬುದನ್ನು ಎಲ್ಲರೂ ಮನ ಗಾಣಬೇಕು. ನಮಗೆ ರಕ್ತವಿದೆ, ಕೇಂದ್ರಸರ್ಕಾರದವರಿಗೆ ಒಂದು ಸಾರಿ ಅಥವಾ 100 ಸಾರಿ ಎಚ್ಚರಿಕೆ ಕೊಟ್ಟು ಹೇಳುತ್ತಿದ್ದೇವೆ. ಮಹಾಜನರ ಶಿಫಾರಸ್ಸುಗಳನ್ನು ಏನಾದರೂ ಮುಂದಕ್ಕೆ ಹಾಕಿದರೆ ಅನೇಕ ಅನಿಷ್ಟಗಳು ಬರುತ್ತವೆ, 'ಶುಭಸ್ಯ ಶೀಘ್ರಂ' ಎಂಬುದಾಗಿ ಹೇಳುವ ಹಾಗೆ, ಜಾಗ್ರತೆ ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು. ಇಲ್ಲದಿದ್ದರೆ ಹೆಚ್ಚು ತೊಡಕುಗಳಿಗೆ ಅವಕಾಶವಾಗುತ್ತದೆ. ಅದು ಆಗಬಾರದು. ಖಂಡಿತವಾಗಿ ಕೇಂದ್ರದವರು ಮಹಾಜನ್ ಆಯೋಗದವರ ಶಿಫಾರ್ಸನ್ನು ಕೂಡಲೇ ಒಪ್ಪಿಕೊಳ್ಳಲಿ. ಮಾನ್ಯ ಶ್ರೀ ನಿಜಲಿಂಗಪ್ಪ ನವರು ಈಗ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗುವವರಾಗಿದ್ದಾರೆ. ಅವರು ಸಹ ಈ ವಿಷಯ ದಲ್ಲಿ ಹೆಚ್ಚು ಪ್ರಯತ್ನ ಮಾಡುತ್ತಿದ್ದಾರೆಂದು ನಾನು ತಿಳಿದಿದ್ದೇನೆ. ಅವರ ಹೃದಯದಲ್ಲಿರುವಂಥ ವಿಷಯ ಅವರ ಒಂದು ಹೇಳಿಕೆಯಿಂದಲೇ ಸ್ಪಷ್ಟವಾಗಿ ತಿಳಿಯುತ್ತದೆ. ನಮ್ಮ ನಾಯಕರಾಗಿರು ವವರು ಕೆಲವರು ಹೇಳುತ್ತಿದ್ದಾರೆ, ಈ ಭಾಷಾವಾರು ರಚನೆಯಿಂದ ರಾಜ್ಯದ ಹಾಗೂ ದೇಶದ ಐಕ್ಯತೆಗೆ ಭಂಗ ತರುತ್ತಿದೆ, ಅದನ್ನು ಕೈಬಿಡುವುದು ಉತ್ತಮ ಎಂದು. ಇನ್ನು ಕೆಲವರು ಹಲವು ಪ್ರದೇಶಗಳು ಹೋಗುವುದು ಹೋಗಲಿ, ಒಪ್ಪಿಕೊಳ್ಳೋಣವೆಂಬ ವಾದವನ್ನು ಹೇಳು

(ಶ್ರೀ ಎ. ಜೆ. ದೊಡ್ಡಮೇಟಿ)

ತ್ತಾರೆ. ಅದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಆ ರೀತಿ ಹೇಳಿದರೆ ಏನು ಅರ್ಥ! ಆ ವಾದ ಅಶಾಸ್ತ್ರೀಯವಾದುದು. ಯಾವ ಶಾಸ್ತ್ರವೇ ಆಗಲೀ ಅಥವಾ ಯಾವ ನಿಸರ್ಗ ನಿಯಮವೂ ಈ ವಾದಕ್ಕೆ ಸಮರ್ಥಿಸುವುದಿಲ್ಲ. ಯಾರೋ ಕೆಲವರನ್ನು ಮಂತ್ರಿಗಳನ್ನಾಗಿ ಮಾಡುವುದಕ್ಕೆ ಕರ್ನಾಟಕ ಪ್ರಾಂತ್ಯ ರಚನೆಯಾಗಲಿಲ್ಲ. ಅದರ ರಚನೆಗೆ ಬಹಳ ದೊಡ್ಡ ತತ್ವಜ್ಞಾನಿಯ ಆಶ್ರಯವಿದೆ. ಅದರಿಂದಲೇ ಅದು ವಿಶ್ವ ಮಾನ್ಯವಾದುದಾಗಿದೆ. ಒಂದು ವಿಚಾರವನ್ನು ಈಗ ಹೇಳಬೇಕಾಗಿದೆ. ಭಾಷೆ ಅಂದರೇನು? ಭಾಷೆ ಅಂದರೆ ಆಯಾ ಜನಾಂಗದ ಪ್ರಾಣ. ಆ ಪ್ರಾಣಶಕ್ತಿಯ ಪರಿಶುದ್ಧತೆಗಾಗಿ ಮತ್ತು ಅದನ್ನು ಸಾರ್ಥಕಗೊಳಿಸಲು ಆ ಶಕ್ತಿಯ ಪ್ರಚೋದನೆಗಾಗಿ ಭಾಷಾವಾರು ಪ್ರಾಂತ್ಯ ನಿರ್ಮಾಣವಾಗಬೇಕು, ಅದು ಸೂರ್ಯಚಂದ್ರ ಇರುವವರೆಗೂ ಇರಬೇಕು. ಕೇವಲ ಕರ್ಣಾಟಕ ಅಭಿಮಾನಿಯಾಗಿ ಮಾತ್ರ ನಾನು ಮಾತನಾಡುತ್ತಾ ಇಲ್ಲ. ನನಗೆ ಇಡೀ ದೇಶದ ಹಿತ ಮುಖ್ಯ. ಪ್ರಜಾಪ್ರಭುತ್ವದಲ್ಲಿ ಭಾಷಾವಾರು ಪ್ರಾಂತ ರಚನೆಯಲ್ಲಿ ಪ್ರಾಣಶಕ್ತಿಯ ಸ್ಫೂರ್ತಿ ಮತ್ತು ಸಮರ್ಥನೆ ದೇಶಕ್ಕೆ ದೊರಕಬೇಕು. ಇದರ ಬಗ್ಗೆ ನಾನು ಪುಸ್ತಕಗಳನ್ನು ಬರೆದಿದ್ದೇನೆ. ಅದನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಅವರು ಓದದೇ ಇದ್ದರೆ ಅವನ್ನು ಖಂಡಿತವಾಗಿ ಓದುತ್ತಾರೆಂದು ನಾನು ತಿಳಿದಿದ್ದೇನೆ. ನೈಸರ್ಗಿಕಕ್ಕೆ ಹಾಗೂ ನಿಯಮಕ್ಕೆ ವಿರೋಧವಾಗಿ ಭಾಷಾವಾರು ರಾಜ್ಯ ನಿರ್ಮಾಣ ವಿಸರ್ಜಿಸಬೇಕು. ನಮ್ಮ ಕರ್ಣಾಟಕ ಪ್ರಾಂತ ರಚನೆಯಾಗಿ ಈಗಾಗಲೇ 10 ವರ್ಷಗಳಾದವು. ಇವತ್ತಿನ ದಿವಸ ಮುಂಬೈನವರು ನಮಗೆ ಹರಿಹರ ಭಾಗ ಕೊಡಿ ಎಂದು ಕೇಳಬಹುದಾಗಿತ್ತು. ಏಕೆಂದರೆ ಅವರಿಗೆ ಕರ್ಣಾಟಕದಲ್ಲಿ ಮೊದಲಿನಿಂದಲೂ ಸ್ವಾಭಾವಿಕವಾಗಿರತಕ್ಕ ದೌರ್ಬಲ್ಯ ಗೊತ್ತಿದೆ. ಔದಾರ್ಯದ ಹೆಸರಿನಲ್ಲಿ ಅವರು ಹಾಗೆ ಹೇಳಬಹುದು. ಇನ್ನೂ ಭಾಷಾವಾರು ರಾಜ್ಯ ನಿರ್ಮಾಣವಾಗಬೇಕೆಂದು ಕೇಳದಿರುವ ಸ್ಥಿತಿ ಕಾಣಿಸುವುದಿಲ್ಲ. ಭಾಷಾವಾರು ರಾಜ್ಯಗಳು ಇನ್ನೂ ಬರುತ್ತವೆ. ಈ ಹೊತ್ತು ಹೆಚ್ಚಿಗೆ ಹಾನಿಯಾಗಲೀ, ಲಾಭವಾಗಲೀ ಭಾಷಾವಾರು ರಾಜ್ಯ ಇರಬೇಕು.

ಶ್ರೀ ಎಸ್. ಗೋಪಾಲಗೌಡ.—ಅವಿನ್ನೂ ಅಸ್ತಿತ್ವಕ್ಕೆ ಬಂದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಒಂದು ಕಾಲಕ್ಕೆ ಇದನ್ನು ಒಪ್ಪುತ್ತೇನೆ. ಈ ರಾಜ್ಯವೂ ಹೋಗುತ್ತದೆ, ಅಷ್ಟೇ ಅಲ್ಲ, ನಮ್ಮ ರಾಷ್ಟ್ರದ ಮೇರೆಯೇ ಇಲ್ಲದಂತಾಗುತ್ತದೆ. ವಿಶ್ವರಾಜ್ಯ ಒಂದು ಕಾಲಕ್ಕೆ ಬರುತ್ತದೆ. ಇಂತಹ ವಿಶ್ವದ ಕಲ್ಯಾಣಕ್ಕೆ ಕರ್ಣಾಟಕಬೇಕಾಗಿದೆ. ಅದು ಬರೀ ಕನ್ನಡಿಗರಿಗೆ ಮಾತ್ರವಲ್ಲ. ಕರ್ಣಾಟಕ ಮಹಿಮೆ ಎಂಬ ಪುಸ್ತಕದಲ್ಲಿ ನಾನು ಹಾಡಿರುವ ಮೊಟ್ಟಮೊದಲನೆಯ ಪದ್ಯ ಇದು. ವಿಶ್ವದ ಕಲ್ಯಾಣಕ್ಕೆ ಭಾರತ ಮೂಲೋದ್ಧಾರವಾಗಿ ಪ್ರಜ್ವಲಿಸುತ್ತಿರಬೇಕು. ಆಗ ಕರ್ಣಾಟಕ ಏಕಶಕ್ತಿಯಿಂದ ಬೆಳಗಬೇಕು. ಈ ಒಂದು ತತ್ವದ ಮೇಲೆ ನಿಂತು ಯಾರು ಕರ್ಣಾಟಕ ರಾಜ್ಯವನ್ನು ನಿರ್ಮಾಣ ಮಾಡುತ್ತಾರೋ ಅಂತಹವರು ಭಾಷಾವಾರು ಪ್ರಾಂತ್ಯ ತೆಗೆಯಿರಿ ಎಂದು ಹೇಳಬಹುದಿತ್ತು, ಆದರೆ ನಮ್ಮ ಈ ಮೂಲತತ್ವವನ್ನು ಇನ್ನೂ ಯಾರು ಅರಗಿಸಿಕೊಳ್ಳಲಿಲ್ಲ. ಆದ್ದರಿಂದ ದಯಮಾಡಿ ಇನ್ನು ಮುಂದೆ ಭಾಷಾವಾರು ರಾಜ್ಯ ಪ್ರಶ್ನೆ ಹೋಗಲಿ ಎನ್ನುವ ಪ್ರಚಾರವನ್ನು ಯಾರೂ ಮಾಡಬಾರದು. ಅದು ದೇಶದ ಐಕ್ಯತೆಗೆ ತೊಂದರೆಯಾಗುತ್ತದೆಂದು ನಾನು ಬಹಳ ವಿನಯಪೂರ್ವಕವಾಗಿ ಇಲ್ಲಿ ಹೇಳುತ್ತಿದ್ದೇನೆ. ಏಕೆಂದರೆ ಇದರಲ್ಲಿ ಒಂದು ರಾಜಕೀಯ ದೃಷ್ಟಿ ಇಲ್ಲ. ಇದು ನೈಸರ್ಗಿಕದ ಆಧಾರದ ಮೇಲೆ ಇವೆ. ಇದು ಒಂದು ಸಜೀವ ಶಕ್ತಿ. ಇದು ಬರೀ ಕಲ್ಲು, ಮಣ್ಣು ಅಲ್ಲ, ಇದು ಬರೀ ಜಲವಲ್ಲ, ಇದರ ಹಿಂದೆ ಒಂದು ಆತ್ಮಶಕ್ತಿಯಿದೆ. ಇಡೀ ಭಾರತಕ್ಕೆ, ರಾಷ್ಟ್ರಕ್ಕೆ ಆತ್ಮವಿದೆ. ಇಡೀ ಕರ್ಣಾಟಕ ರಾಜ್ಯಕ್ಕೆ ಆತ್ಮವಿದೆ. ಹಾಗೂ ಪ್ರಾಣಶಕ್ತಿ ಇದೆ. ಅದರ ಪರಿಶುದ್ಧತೆಯಾಗುವವರೆಗೂ ಇದನ್ನು ತೆಗೆಯಬಾರದು. 10 ವರ್ಷಗಳ ಹಿಂದೆ ಕರ್ಣಾಟಕ ಕಟ್ಟಿದರು, ಮತ್ತೆ ಈ 10 ವರ್ಷದೊಳಗೆ ಅವರಿಗೆ ಏನಾಯಿತೋ ಗೊತ್ತಿಲ್ಲ. ನಾಳೆ ಈ ವಿಚಾರವನ್ನು ಪರಿಪಕ್ವ ರೀತಿಯಲ್ಲಿ ಏಕೆ ಆಲೋಚನೆ ಮಾಡಲಿಲ್ಲವೆಂದು ಜನ ನಮ್ಮನ್ನು ಕೇಳಬಹುದು. ಆದ್ದರಿಂದ ಇದನ್ನು ಚೆನ್ನಾಗಿ ವಿಚಾರ ಮಾಡಬೇಕು. ಭಾಷಾವಾರು ರಾಜ್ಯದ ನಿರ್ಮಾಣದ ಬಗ್ಗೆ ತಾತ್ವಿಕವಾಗಿ ವಿಚಾರಮಾಡಿ ಕರ್ಣಾಟಕದ ಪ್ರಾಣಶಕ್ತಿಗೆ ಅಪವಾದ ಮಾಡಬಾರದು ಎಂಬುದಾಗಿ ನಾನು ಹೇಳುತ್ತೇನೆ.

ಕೊನೆಯದಾಗಿ ಇವತ್ತು ಮಹಾರಾಷ್ಟ್ರ ಸರ್ಕಾರದವರು ತಮ್ಮ ರಾಜ್ಯದ ಜನತೆಯ ಕಲ್ಯಾಣ ದೃಷ್ಟಿಯಿಂದ ಹಾಗೂ ಮಹಾರಾಷ್ಟ್ರದ ಜನಸಾಮಾನ್ಯರ ಕಲ್ಯಾಣ ದೃಷ್ಟಿಯಿಂದ ಇಂತಹ ರಾಜಕೀಯ ಹುಡುಗಾಟವನ್ನು ಖಂಡಿತವಾಗಿ ಬಿಟ್ಟು ಮಹಾಜನ್ ಕಮೀಷನ್ನಿನವರ ವರದಿಯನ್ನು ಒಪ್ಪ

ಬೇಕೆಂದು ನಾನು ಸೂಚಿಸುತ್ತೇನೆ. ಒಂದು ವೇಳೆ ಕೇಂದ್ರ ಸರ್ಕಾರದವರು ಮಹಾರಾಷ್ಟ್ರದವರ ಹುಡುಗಾಟಿಕೆಗೆ ತಲೆಬಾಗಿದರೆ ಕೇಂದ್ರ ಸರ್ಕಾರ ಆ ರೀತಿ ನಡೆದುಕೊಂಡರೆ ಅವರ ಆ ಒಂದು ಭ್ರಮಣೆಯಿಂಧ ಏನೇನೋ ಆದೀತೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

HALF-AN-HOUR DISCUSSION ARISING OUT OF ANSWERS TO STARRED QUESTION No. 28 *re*: CLOSURE OF MANDYA NATIONAL PAPER MILLS

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಸ್ವಾಮಿ, ಈ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್‌ನ ವಿಚಾರ ಪ್ರಶ್ನೆಯಲ್ಲಿ ಬಂದಿತ್ತು. ಈ ಮಿಲ್ಲಿನ ವಿಷಯದಲ್ಲಿ ನಮಗೆ ಪೂರ್ಣವಾಗಿ ಅನುಮಾನವುಂಟಾಗಿದೆ ಎನ್ನುವುದನ್ನು ಇವೊತ್ತಿನ ದಿವಸದ ಅರ್ಧಗಂಟೆಯ ಚರ್ಚೆಯಲ್ಲಿ ವಿಮರ್ಶೆ ಮಾಡಬೇಕಾಗಿದೆ. ಸರ್ಕಾರದವರಿಗೆ ಕೈಗಾರಿಕೆಯನ್ನು ಜಾಸ್ತಿ ಮಾಡಬೇಕು, ಅದಕ್ಕೆ ಬಂಡವಾಳವನ್ನು ಒದಗಿಸಬೇಕು, ಜಮೀನು ಮತ್ತು ನೀರನ್ನು ಒದಗಿಸಬೇಕು ಹಾಗೂ ರಿಯಾಯ್ತಿ ದರದಲ್ಲಿ ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಮಹದಾಶೆ ಇದೆ. ಇದನ್ನು ದುರುಪಯೋಗಪಡಿಸಿಕೊಂಡು ದೇಶದಲ್ಲಿ ಅನೇಕ ಮುಂದಾಗ್ರಗಳು ಮೈಸೂರಿಗೆ ಓಡಿ ಬರುತ್ತಿರುವುದು ಉಂಟು. ಈ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಆರಂಭವಾದಾಗಿನಿಂದ ಇಂದಿನವರೆಗೂ ನೋಡಿದ ಪಕ್ಷದಲ್ಲಿ ಇದು ಚಿತ್ರ ವಿಚಿತ್ರವಾದ ಕೈಗಾರಿಕೆಯಾಗಿದೆ. ಇವೊತ್ತಿನ ದಿವಸ ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ ಮೇಲೆ ಯಾರು ಇದ್ದಾರೋ ಅವರ ಒಂದು ಇತಿಹಾಸವನ್ನು ನೋಡಿದ ಪಕ್ಷದಲ್ಲಿ ಅವರಿಗೆ ಯಾರೋ ಒಬ್ಬರು ಕೇಂದ್ರದ ಮಂತ್ರಿಗಳ ಸಂಬಂಧ ಇದ್ದು ಅವರ ಬೆಂಬಲದಿಂದ ಮಂಡ್ಯಾ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ಕಚ್ಚಾ ವಸ್ತುಗಳನ್ನು ಉಪಯೋಗಿಸಿಕೊಂಡು ಅಲ್ಲಿ ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ಲನ್ನು ಸ್ಥಾಪನೆ ಮಾಡಬಹುದು ಎಂಬ ಉದ್ದೇಶದಿಂದ ಅದನ್ನು ಸ್ಥಾಪನೆ ಮಾಡಲು ಅವರು ಯೋಚನೆ ಮಾಡಿದರು. ಅವರು ಇವೊತ್ತಿನವರೆಗೂ ಮೆಷನರಿ ಕೊಂಡದ್ದು ವಿವರಗಳು, ರಶೀತಿಗಳು, ವೋಚರುಗಳು ಮತ್ತು ಅವರು ಅಲ್ಲಿ ಕೆಲಸ ಮಾಡುತ್ತಿರುವ ಕಂಟ್ರಾಕ್ಟರುಗಳಿಗೆ ಕೊಟ್ಟ ಕಿರುಕುಳ ಇವುಗಳನ್ನು ಲೆಕ್ಕ ಹಾಕಿಕೊಂಡರೆ ಅದು ಒಂದು ಸಣ್ಣ ಮುಂಥ್ರಾ ಸಂಸ್ಥೆಯಾಗಿ ನಡೆದುಕೊಂಡು ಬಂದಿದೆ. ಇದನ್ನು ನಾನು ಇಲ್ಲಿ ಏತಕ್ಕೆ ಒತ್ತಿ ಹೇಳುತ್ತಿದ್ದೇನೆಂದರೆ, ಸರ್ಕಾರ ಮೊದಲು ಈ ಕಾರ್ಖಾನೆಗೆ 3½ ಲಕ್ಷ ರೂಪಾಯಿಗಳ ಬಂಡವಾಳವನ್ನು ಕೊಟ್ಟಿದೆ. 40 ಲಕ್ಷ ರೂಪಾಯಿಗಳ ಗ್ಯಾರೆಂಟಿಯನ್ನು ಕೊಟ್ಟಿದೆ. ಅದಕ್ಕೆ ಸರ್ಕಾರದವರು ಕೊಡುವ ಸಹಾಯಕ್ಕಿಂತ ಹೆಚ್ಚಿಗೆ ಸಹಾಯವನ್ನು ಕೊಟ್ಟಿದೆ. ಇದೇ ರೀತಿ ನಾಲ್ಕಾರು ಕೈಗಾರಿಕೆಗಳಿಗೆ ಸರ್ಕಾರದವರು ಸಹಾಯವನ್ನು ಮಾಡಿದ್ದಾರೆ. ನಮ್ಮ ಸರ್ಕಾರದವರು ಕೈಗಾರಿಕೆ ದೇಶದಲ್ಲಿ ಜಾಸ್ತಿ ಬೆಳೆಯಲಿ ಎನ್ನುವ ಉದ್ದೇಶದಿಂದ ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಬೇರೆ ಪ್ರಾಂತದವರನ್ನು ಆಕರ್ಷಣೆ ಮಾಡಲು ಪ್ರಯತ್ನ ಮಾಡಿದ್ದಾರೆ. ಇವೊತ್ತಿನ ದಿವಸ ಸರ್ಕಾರದವರು ಉಪಕಾರ ಮಾಡುವಂತಹ ಒಂದು ಯೋಜನೆಗೆ ಸೇರಿಕೊಂಡಿರುವರು ಬಹಳ ಜನ ಸಣ್ಣ ಮುಂಥ್ರಾಗಳು ಇದ್ದಾರೆ ಎಂದು ನಾನು ಸರ್ಕಾರಕ್ಕೆ ಈ ಮೂಲಕ ಎಚ್ಚರಿಕೆಯನ್ನು ಕೊಡಬೇಕಾಗಿದೆ. ಈ ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ಸ್‌ನವರು ಮತ್ತು ಇನ್ನು ಕೆಲವು ಕೈಗಾರಿಕೆಗಳವರು ಪರದೇಶದಲ್ಲಿ ಕೊಂಡ ಮೆಷನರಿಗೆ 20-30 ಪರ್ಸೆಂಟ್ ಜಾಸ್ತಿ ಹಣವನ್ನು ಕೇಳಿದ್ದಾರೆ. ತಾವು ಹಾಕುವ ಬಂಡವಾಳ 20 ಪರ್ಸೆಂಟ್ ಆಗಿದ್ದರೆ ಈ ಸರ್ಕಾರದಿಂದ, ಇಂಡಿಯಾ ಸರ್ಕಾರದ ಫೈನಾನ್ಸಿಯಲ್ ಕಾರ್ಪೊರೇಷನ್ನಿನಿಂದ, 30 ಪರ್ಸೆಂಟ್ ಬಂಡವಾಳವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ಪ್ರಯತ್ನಮಾಡಿ, ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಅವುಗಳನ್ನು ನಡೆಸಿಕೊಂಡು ಬರುತ್ತಿರುವ ನಾಲ್ಕಾರು ಕೈಗಾರಿಕೆಗಳು ಇವೆ. ಈ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಲಿನ ವಿಚಾರದಲ್ಲಿ ಹೇಳುವುದಾದರೆ, ಈ ಮಿಲ್ಲಿಗೆ ಸಾಮಾನುಗಳನ್ನು ಸಪ್ಲೈಮಾಡಲು ಯಾರು ಯಾರು ಕಂಟ್ರಾಕ್ಟ್ ತೆಗೆದುಕೊಂಡು ಸಾಮಾನುಗಳನ್ನು ಸಪ್ಲೈ ಮಾಡಿದ್ದಾರೆಯೋ ಆ ಸಂಬಂಧವಲ್ಲಿ ಅಂದಿನಿಂದ ಇಂದಿನವರೆಗೆ ಮಾಡಿರತಕ್ಕ ಬಿಲ್ಲುಗಳೆಲ್ಲವೂ ಬರೀ ಭೋಗಸ್ ಬಿಲ್ಲುಗಳು. ರಶೀತಿಗಳು, ವೋಚರ್‌ಗಳು ಎಲ್ಲವೂ ಭೋಗಸ್. ನಾನು ಕೂಡ ಅಲ್ಲಿ ಒಮ್ಮೆ ಸಂಪರ್ಕ ಇಟ್ಟುಕೊಂಡಿದ್ದೆ. ನಾನು ಅಲ್ಲಿಗೆ ಹೋದಾಗ